contemptuous attitude is being shown by the Chief Minister to this House. Therefore, I request with all humility at my command to overlook if there are any small and trivial technical matters in the way, and allow the Privilege Motion to be discussed and take up the follow-up action that logically follows from the Privilege Motion.

MR. SPEAKER.—I will go through all the aspects and examine it. And if the House has no objection, I will give my ruling on Monday.

SRI H. D. DEVE GOWDA.—Under Rule 312 I have sent a Motion.

MR. SPEAKER.—It is a matter which required legal examination. I have referred the notice to the Law Department and the Law Minister. I think it may be possible for me to include it on Monday or Tuesday. I will see that it is posted in the Agenda on Monday or Tuesday after obtaining the remarks from the Law Department.

SRI H. D. DEVE GOWDA.—Even though I do not know the ABCD of law as a member of this House, I feel that there is no to need to take the opinion of the Law Department to admit in the House under the Rules of Procedure.

ಅಧ್ಯಕ್ಷರು.—ಕಾನೂನು ಮಂತ್ರಿಗಳಿಂದ ಅದರ ಬಗ್ಗೆ ವರದಿ ಬರಬೇಕು. ಆ ವರದಿ ಬಂದ ಮೇಲೆ ನಾನು ತೆಗೆದುಕೊಳ್ಳುತ್ತೇನೆ.

SRI H. D. DEVEGOWDA.—As per Chandrakantharaj Urs, a legal expert, it does not require legal opinion.

Non-official Resolution

re: relieving the weaker sections of the community by amending the Debt Relief Act.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—"ಬ್ಯಾಂಕುಗಳು, ಸರ್ಕಾರ ಹಾಗೂ ಸಹಕಾರ ಸಂಘಗಳಿಂದ ಪಡೆದ ಸಾಲದಿಂದ ಸಮಾಜದಲ್ಲಿರುವ ದುರ್ಬಲ ವರ್ಗದವರಿಗೆ ಸಹಾಯವನ್ನು ಒದಗಿಸಿಕೊಡುವುದಕ್ಕೆ ಕರ್ನಾಟಕ ರಾಜ್ಯವ ಋಣಪರಿಹಾರ ಶಾಸನಕ್ಕೆ ತಿದ್ದುಪಡಿ ಮಾಡಬೇಕೆಂದು ಸರ್ಕಾರದವರಿಗೆ ಈ ಸಭೆ ಶಿಫಾರಸ್ಸು ಮಾಡುತ್ತದೆ" ಎನ್ನುವ ಈ ಖಾಸಗಿ ನಿರ್ಣಯವನ್ನು ಸಭೆಯು ಮುಂದೆ ವಂದಿಸುವುದಕ್ಕೆ ಇಚ್ಛೆಪಡುತ್ತೇನೆ.

The question was proposed

† ಶ್ರೀ ಎಚ್. ಗಂಗಾಧರನ್.—ಮಾನ್ಯ ಸಭಾಧ್ಯಕ್ಷರೇ, "ಸರ್ವೇ ಜನಾಃ ಸುಖಿನೋಭವಂತು" ಎನ್ನುವ ಸಿದ್ಧಾಂತದ ಮೇಲೆ ಯುಗಾಂತರಗಳಿಂದ ನಡೆದು ಬಂದ ಈ ದೇಶದಲ್ಲಿ ೧೯೭೦ನೇ ಇಸವಿಯಲ್ಲಿ ೧೦೦ಕ್ಕೆ ೪೦ ಜನ ಬಡತನದ ರೇಖೆಯಿಂದ ಕೆಳಗಿದ್ದರು. ಅದು ಬರು ಬರುತ್ತಾ ೧೯೭೫-೭೬ನೇ ಸಾಲಿಗೆ ೧೦೦ಕ್ಕೆ ೬೦ ಜನ ಬಡತನ ರೇಖೆಯಿಂದ ಕೆಳಗೆ ಇರತಕ್ಕಂಥ ಸಂದರ್ಭದಲ್ಲಿ ಆ ಬಡಜನತೆಯ ಅಭಿವೃದ್ಧಿಗಾಗಿ ಸೂಕ್ತ ಯೋಜನೆಗಳನ್ನು, ಸೂಕ್ತ ಕಾನೂನುಗಳನ್ನು ತರತಕ್ಕಂಥಾದ್ದು ಎಲ್ಲರ ಭಾಗ್ಯದ ಕೆಲಸ ಎಂದು ನಾನು ಭಾವಿಸುತ್ತೇನೆ. ಹಾಗೆ ಬಡ ಜನರಿಗೆ ಸೂಕ್ತವಾದ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೋಸ್ಕರ ಯಾವುದೇ ಪಕ್ಷವಾಗಲೀ ಉದಾತ್ತವಾದಂತಹ ಘೋರಣೆಯನ್ನು ತಳೆದು ಉಪಯುಕ್ತವಾದ ಶಾಸನವನ್ನು ರಚನೆ ಮಾಡಿದಾಗ ಅಪರು ಯಾವ ಪಕ್ಷದವರಾದರೂ ಅವರನ್ನು ಸ್ವಾಗತಿಸತಕ್ಕಂಥಾದ್ದು

ಅವರ ಸೌಜನ್ಯ ಎಂಬುದಾಗಿ ನಾನಾದರೂ ಈ ಸಂದರ್ಭದಲ್ಲಿ ಅಂದು ಕೊಂಡಿದ್ದೇನೆ. ಈ ಒಂದು ಸರ್ಕಾರ ನಮ್ಮ ರಾಜ್ಯದಲ್ಲೂ ಸಹ ಒಂದು ಶಾಸನವನ್ನು ೧೯೭೦ನೇ ಇಸವಿಯಲ್ಲಿ ಈ ದೇಶದ ಜನರ ಹಿತರಕ್ಷಣೆ ಮಾಡುವ ಸಲುವಾಗಿ ತಂದಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಅವರ ಜೊತೆಯಲ್ಲಿ ಇವತ್ತು ಯಾವ ಒಂದು ನಿರ್ಣಯವನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಅಪೇಕ್ಷೆಪಟ್ಟುಕೊಂಡು ಇಲ್ಲಿ ನಿಂತಿದ್ದೇನೆಯೋ ಆ ನಿರ್ಣಯವನ್ನು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಿಂದಲೋ ಅಥವಾ ಕಂದಾಯ ಮಂತ್ರಿಗಳಿಂದಲೋ ಈ ಸಭೆಯ ಮುಂದೆ ಮಂಡಿಸಿದ್ದಾಗಿದ್ದರೆ ಅದು ಇನ್ನೂ ಸ್ವಾಗತಾರ್ಹವಾಗುತ್ತಿತ್ತು. ಅಥವಾ ನಾನಾದರೂ ಮುಖ್ಯಮಂತ್ರಿಗಳಾಗಿ ಅಥವಾ ಕಂದಾಯ ಮಂತ್ರಿಯಾಗಿ ಈ ನಿರ್ಣಯವನ್ನು ಮಂಡಿಸಲು ಅವಕಾಶ ಸಿಕ್ಕಿದ್ದರೆ ಇನ್ನೂ ಸಂತೋಷವಾಗುತ್ತಿತ್ತು. ಆ ರೀತಿಯ ಅವಕಾಶ ಸಿಗದಿದ್ದರೂ ಕೂಡ ಈ ಮನೆಯ ಒಬ್ಬ ಸಾಮಾನ್ಯ ಸದಸ್ಯನಾಗಿ ಈ ಸಭೆಯಲ್ಲಿ ನಿರ್ಣಯವನ್ನು ಮಂಡಿಸುವುದಕ್ಕೆ ಸಂತೋಷ ಪಡುತ್ತಿದ್ದೇನೆ. ಈ ಒಂದು ಶಾಸನವನ್ನು ನಮ್ಮ ಸರ್ಕಾರ ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಎಂಬುದಾಗಿ ೧೯೭೬ರಲ್ಲಿ ಜಾರಿಗೆ ತಂದಿದ್ದಾರೆ. ಈ ಒಂದು ಶಾಸನ ಜಾರಿಗೆ ತಂದ ದಿನಾಂಕ : ೨೧ನೇ ಅಕ್ಟೋಬರ್ ೧೯೭೫. ಈ ಶಾಸನದ ಪ್ರಕಾರ ಅನುಕೂಲ ಪಡೆಯುವವರು ಯಾರು ಯಾರು ಎಂದರೆ Small farmers, landless agricultural labourers, weaker sections of society whose income is less than 2,400 rupees per annum ಇಂತಹ ಒಂದು ಶಾಸನವನ್ನು ಜಾರಿಗೆ ತಂದು ದುರ್ಬಲವರ್ಗದವರಿಗೆ ರಕ್ಷಣೆ ಕೊಡತಕ್ಕಂಥ ಒಂದು ಶಾಸನವನ್ನು ಜಾರಿಗೆ ತಂದಿದ್ದಾರೆ ಅದು ನಿಜಕ್ಕೂ ಸ್ವಾಗತಾರ್ಹವಾಗಿದೆ. ಆದುದರಿಂದ ಅದನ್ನು ಸ್ವಾಗತಿಸುತ್ತೇನೆ. ಅದೇ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಮಾತ್ರ ಈ ಸಭೆಯ ಗಮನಕ್ಕೆ ತರುವುದಕ್ಕೆ ನಾನು ಅಪೇಕ್ಷೆ ಪಡುತ್ತಿದ್ದೇನೆ. ಇದರಲ್ಲಿ ನಾವು ಬಹಳ ಸಂತೋಷದಿಂದ ಹೇಳತಕ್ಕಂಥಾದ್ದು ಏನೆಂದರೆ ಇಂತಹ ಶಾಸನ ನಮ್ಮಂತಹ ರಾಜ್ಯಕ್ಕೆ ಬಹಳ ಅಗತ್ಯವಾಗಿರತಕ್ಕಂಥಾದ್ದು. ಆದರೆ ಈ ಶಾಸನಕ್ಕೂ ಮೊದಲೇ ಈ ರಾಜ್ಯಕ್ಕೆ ಇದರ ಪ್ರಯೋಜನವಾಗಿದೆ. ೧೨ನೇ ಶತಮಾನದಲ್ಲಿ ಚಾಳುಕ್ಯ ಚಕ್ರವರ್ತಿಯ ಕಾಲದಲ್ಲಿ ಬಸವಣ್ಣನವರು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲೇ ಇಂತಹ ಒಂದು ಶಾಸನವನ್ನು ಜಾರಿಗೆ ತಂದಿದ್ದಾರೆ. ಅದನ್ನು ಹೇಳುವುದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಇದು ಆದ ನಂತರ ಈ ದೇಶದಲ್ಲಿ ಇಂತಹ ಶಾಸನ ಬಂದದ್ದು ಬಹಳ ಕಾಲದ ನಂತರ ೧೯೫೬ನೇ ಇಸವಿಯಲ್ಲಿ ಮದ್ರಾಸ್ ರಾಜ್ಯದಲ್ಲಿ ಈ ಶಾಸನವನ್ನು ಶ್ರೀಮಾನ್ ರಾಜಗೋಪಾಲಾಚಾರಿಯವರು ಕಾರ್ಯರೂಪಕ್ಕೆ ತಂದರು. ಮದ್ರಾಸ್ ಡೆಟ್ ಕನ್‌ಸಿಲಿಯೇಷನ್ ಆಕ್ಟ್ ಎಂದು ಹೇಳಿ ೧೯೫೬ರಲ್ಲಿ ಜಾರಿಗೆ ತಂದು ಅನೇಕ ಜನರನ್ನು ಋಣಮುಕ್ತರನ್ನಾಗಿ ಮಾಡುವುದಕ್ಕೆ ಪ್ರಯತ್ನಮಾಡಿದರು. ಅದು ಆದ ನಂತರ ನಮ್ಮ ಕರ್ನಾಟಕದಲ್ಲಿ ಮತ್ತೊಮ್ಮೆ ೧೯೬೬ರಲ್ಲಿ The Mysore Agricultural Debt Relief Act 1966 ಎಂಬುದಾಗಿ ಒಂದು ಶಾಸನವನ್ನು ಜಾರಿಗೊಳಿಸಿ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಈ ದೇಶದಲ್ಲಿ ಜಾರಿಗೆ ತಂದರು. ಆದರೆ ದುರ್ದೈವದಿಂದ ಆ ಶಾಸನ ನಮ್ಮ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್‌ನ್ನು ೧೯೬೯ರಲ್ಲಿ ಹಾಕಲಾಗಿ, ಕೋರ್ಟ್ ಅದನ್ನು ಸಿಂಧುವಾದುದಲ್ಲವೆಂದು ಹೇಳಿ ಆ ಕಾನೂನನ್ನು ಕಿತ್ತು ಹಾಕಿದ್ದರ ಪರಿಣಾಮವಾಗಿ ಮತ್ತೆ ಕೆಲವರು ಸುಪ್ರೀಂ ಕೋರ್ಟಿಗೆ ಹೋಗಿ ಈಗ ೨ ತಿಂಗಳ ಹಿಂದೆ ಸುಪ್ರೀಂ ಕೋರ್ಟ್ ಅದೇ ಶಾಸನ ಸಿಂಧುವಾದುದೆಂ ಎಂಬುದಾಗಿ ತೀರ್ಪು ಕೊಟ್ಟಿರತಕ್ಕಂಥಾದ್ದು ಸಭೆಯ ಗಮನಕ್ಕೆ ಬಂದಿರಬಹುದು. ಇವನ್ನೆಲ್ಲಾ ಗಮನಿಸಿದ್ದಾಗ್ಯೂ ಮೈಸೂರು ಅಗ್ರಿಕಲ್‌ಚರಲ್ ಡೆಟ್ ರಿಲೀಫ್ ಆಕ್ಟ್‌ಗೂ ಕರ್ನಾಟಕ ಡೆಟ್ ರಿಲೀಫ್ ಆಕ್ಟ್‌ಗೂ ಕೆಲವು ಅಂಶಗಳಲ್ಲಿ ಸಂಬಂಧ ಇರಬಹುದು. ಇವೆರಡನ್ನೂ ಏಕ ಕಾಲದಲ್ಲಿ ಜಾರಿಗೆ ತರುವಂತಹ ಕಾಲದಲ್ಲಿ ಶಾಸನ ಬದ್ಧವಾಗಿ ಇರುವಂತಹ ತೊಡಕುಗಳು ಏನು ಬರುತ್ತದೆ ಎಂಬುದನ್ನು ಆಲೋಚನೆ ಮಾಡುವುದಕ್ಕೆ ಸಂಬಂಧಪಟ್ಟವರಿಗೆ ಬಿಡುತ್ತೇನೆ. ಅದು ನನ್ನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದರೆ ಇವತ್ತು ಇಲ್ಲಿ ಮುಖ್ಯವಾಗಿ ಹೇಳಬೇಕಾಗಿರತಕ್ಕಂಥ ಅಂಶ ಏನೆಂದರೆ ಮದ್ರಾಸ್ ಡೆಟ್ ರಿಲೀಫ್ ಆಕ್ಟ್ ಕಲಂ ೨ (ಎಫ್) ಅದರಲ್ಲಿರುವಂತೆ ಸಾಲ ಎಂದರೆ ಏನು ವಿವರ ಕೊಟ್ಟಿದ್ದಾರೆಂಬುದನ್ನು ಗಮನಿಸಬೇಕು.—

In the Madras Debt Conciliation Act, it is stated :

"debt" means all liabilities owing to a creditor, in cash or kind, secured or unsecured, whether payable under a decree or order of a civil court or otherwise, and whether mature or not but shall not include arrears of wages, land revenue or

anything recoverable as an arrear of land revenue, rent as defined in the Madras Estates Land Act, 1908, or any money for the recovery of which a suit is barred by limitation."

ಆ ಒಂದು ಅಂಶವನ್ನು ಮೈಸೂರು ಅಗ್ರಿಕಲ್‌ಚರಲ್ ಡೆಟ್ ರಿಲೀಫ್ ಆಕ್ಟ್ ೧೯೬೬, ೨ನೇ ವಿಧಿಯ ಉಪವಿಧಿ ೪ರಲ್ಲಿ ಯಾವ ರೀತಿಯಲ್ಲಿ ಹೇಳಿದ್ದಾರೆಂದರೆ:—

In the Act, it says as follows :—

"Debt means any liability in cash or kind whether secured or unsecured due from a debtor whether payable under a decree or order of any Civil Court or otherwise and includes mortgage money the payment of which is secured by usufructuary mortgage of immovable property but it does not include arrears of wages payable in respect of agriculture for manual labour or any liability, for the recovery of which is barred by limitation."

ಮತ್ತು ಸ್ಮಾಲ್ ಫಾರ್ಮರ್ ಎನ್ನುವುದಕ್ಕೆ ಆಕ್ಟಿನ ಮೂರನೇ ವಿಧಿಯ 'ಇ'ನಲ್ಲಿ ಏನು ಕೊಟ್ಟಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

3(e).—Small Farmer means a person who holds whether as owner, tenant or mortgagee with possession or partly in on capacity and partly in another not more than one unit of land and who has no income from any source other than agriculture."

ಇಲ್ಲಿ ತಾವು ಗಮನಿಸಬೇಕಾದ್ದೆಂದರೆ ಯಾರಾದರೂ ಕೂಡ ಆವನು ಮಾಲೀಕನಾಗಿರಬೇಕು, ಗೇಣಿದಾರನಾಗಿರಬೇಕು ಅಥವಾ ಭೋಗ್ಯದಾರನಾಗಿರಬೇಕು ಈ ರೀತಿಯಾಗಿ ಭೂಮಿ ಆವನ ಸ್ವಾಧೀನದಲ್ಲಿದ್ದರೆ ಮಾತ್ರ ಮತ್ತು ಈ ಪರಿಮಿತಿಯಲ್ಲಿ ಆವನು ಒಳಪಡುವುದಾದರೆ ಈ ಶಾಸನ ಆವನಿಗೆ ಅನ್ವಯಿಸುತ್ತದೆ ಎಂದು ತೋರಿಸುತ್ತದೆ. ಆದರೆ ಈ ದೇಶದಲ್ಲಿ ಯಾರು ತೊಂದರೆಯಲ್ಲಿರುತ್ತಾರೆ, ಯಾರು ಬಡವರಾಗಿರುತ್ತಾನೆ ಆವನಿಗೆ ಸೌಲಭ್ಯ ಸಿಗುತ್ತಿಲ್ಲ. ಯಾಕೆಂದರೆ ಆವನಿಗೆ ಸೌಲಭ್ಯ ಕೊಡುವ ಯೋಜನೆ ಮಾಡುವಾಗ ಅನೇಕ ಸಮಸ್ಯೆಗಳು ನ್ಯಾಯಾಲಯದ ಮುಂದೆ ಬರುವುದನ್ನು ನೋಡಿದ್ದೇವೆ. ಮೂಲತಃ ಒಂದು ಉದಾಹರಣೆಯನ್ನು ಹೇಳಬೇಕಾದರೆ, ದಂಪತಿಗಳಿರುತ್ತಾರೆ; ಮನೆಯಲ್ಲಿ ಗಂಡನ ಹೆಸರಿನಲ್ಲಿ ಜಮೀನಿರುವುದಿಲ್ಲ. ಆದರೆ ಹೆಂಡತಿ ಹೆಸರಿನಲ್ಲಿ ನೂರಾರು ಎಕರೆ ಜಮೀನಿರುತ್ತದೆ. ಗಂಡ ಹೆಂಡತಿ ಒಂದೇ ಕುಟುಂಬದಲ್ಲಿದ್ದರೂ ಕೂಡ ಹೆಂಡತಿ ಹೆಸರಿನಲ್ಲಿ ನೂರಾರು ಎಕರೆ ಜಮೀನು ಇದ್ದರೂ ಕೂಡ ಯಾರಾದರೂ ಗಂಡನಿಗೆ ಸಾಲ ಕೊಟ್ಟಿದ್ದರೆ ಈ ಶಾಸನದ ಪ್ರಕಾರ ಆವನಿಗೆ ರಿಯಾಯಿತಿ ಸಿಗುತ್ತದೆ. ಇದು ಗಮನಿಸಬೇಕಾದ ಅಂಶ. ಎರಡನೆಯದಾಗಿ ೨೪೦೦ ರೂಪಾಯಿ ಉತ್ಪನ್ನ ಇಲ್ಲದೇ ಇರುವವರು ಯಾರಿರುತ್ತಾರೆ ಅಂಥವರಿಗೆ ಈ ಶಾಸನ ಅನ್ವಯಿಸುತ್ತದೆ ಎಂದಾಗ ಬೆಂಗಳೂರಿನಂಥ ನಗರದಲ್ಲಿ ಒಂದೂ ಪರೆ ಲಕ್ಷ ರೂಪಾಯಿ ಸಾಲ ಪಡೆದು ೫ ಲಕ್ಷ ರೂಪಾಯಿಯ ಮನೆ ಕಟ್ಟಿಕೊಂಡು, ತನ್ನ ಮಗನಿಗೆ ಬರತಕ್ಕೆ ಲಕ್ಷಾಂತರ ರೂಪಾಯಿ ಆದಾಯದಿಂದ ಸುಖವಾಗಿ ಜೀವನ ನಡೆಸುತ್ತಿದ್ದರೂ ಕೂಡ ಸಾಲ ಪಡೆದ ಯಜಮಾನ weaker section of the society ಎಂದು ಆರ್ಜಿ ಹಾಕಿದರೆ ಆವನು ತೆಗೆದುಕೊಂಡಿದ ಒಂದೂವರೆ ಲಕ್ಷ ರೂಪಾಯಿ ಸಾಲವನ್ನು ನುಂಗಿಹಾಕಿಕೊಳ್ಳುವುದಕ್ಕೆ ಆವಕಾಶ ಇದೆ. ಇದನ್ನೂ ಗಮನಿಸಬೇಕು. ಇದನ್ನು ಪ್ರಸ್ತುತ ವಿಷಯಕ್ಕೆ ಬರುತ್ತಾ ಒಂದು ಮಾತನ್ನು ಅಭಿಮಾನದಿಂದ ಹೇಳಬೇಕಾಗಿದೆ. ಈ ಒಂದು ಶಾಸನ ನಮ್ಮ ದೇಶದಲ್ಲಿ ಜಾರಿಗೆ ಬಂದು ಬಹುಜನರಿಗೆ ಉಪಕಾರವಾಗಿದೆ. ಇದನ್ನು ಸ್ವಾಗತಿಸುವಾಗ ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಶಾಸನ ಜಾರಿಗೆ ಬಂದ ಮೇಲೆ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೧೬ ಕೋಟಿ ರೂಪಾಯಿ ಹಣದಿಂದ ಜನರನ್ನು ಋಣಮುಕ್ತರನ್ನಾಗಿ ಮಾಡಲಾಗಿದೆ. ಇದರಲ್ಲಿ ನಮ್ಮ ದೇಶದಲ್ಲಿ ಇಂಥ ಋಣಕ್ಕೆ ಕಾರಣ

ರಾಗಿದ್ದಂಥವರು ೩೯೭೧ ಲೈಸನ್ಸ್ದಾರ ಮನಿ ಲೆಂಡರ್ಸ್ ಮತ್ತು ೩೩೨೫ ಜನ ಪಾನ್ ಬ್ರೋಕರ್ಸ್. ಇಂಥವರ ಸಾಲದ ಶೂಲದಲ್ಲಿ ಸಿಕ್ಕಿದ್ದಂಥ ಬಡಜನತೆ ೧,೨೮,೪೭೦ ಜನರಿದ್ದರು. ಇಷ್ಟು ಜನರನ್ನು ಈ ಶಾಸನ ಜಾರಿಗೆ ಬಂದಮೇಲೆ ೭೯೮ ಕೋಟಿ ರೂಪಾಯಿ ಸಾಲದಿಂದ ಮುಕ್ತರನ್ನಾಗಿ ಮಾಡಿದ್ದೇವೆ. ಇದರಲ್ಲಿ ೩೨,೨೩೪ ಜನ ಹರಿಜನರು ಇದ್ದರು. ಇವರು ಕೊಡಬೇಕಾಗಿದ್ದ ಸಾಲ ೧.೩೮ ಕೋಟಿ ರೂಪಾಯಿ. ಇದರಿಂದ ಇವರನ್ನು ಮುಕ್ತರನ್ನಾಗಿ ಮಾಡಿದ್ದೇವೆ. ಹೀಗೆಯೇ ೨,೩೪೬ ಜನ ಗಿರಿಜನರಿದ್ದು ಇವರು ಕೊಡಬೇಕಾದ ಸಾಲ ೧೪.೧ ಲಕ್ಷ ರೂಪಾಯಿ. ಇದರಿಂದ ಇವರನ್ನು ಮುಕ್ತರನ್ನಾಗಿ ಮಾಡಿದ್ದೇವೆ. ಇದು ನಿಜವಾಗಿಯೂ ಕೂಡ ಶ್ಲಾಘನೀಯವಾದುದೇ ಸರಿ. ಆದರೆ ಈ ರೀತಿ ಋಣ ಮುಕ್ತರನ್ನಾಗಿ ಮಾಡಿದಂಥ ಕಾಲದಲ್ಲಿ ಇನ್ನೂ ಇತರ ಋಣಗಳಿಗೆ ಯಾರು ಯಾರು ಸಿಕ್ಕಿದ್ದಾರೆ ಅವರನ್ನೂ ಆದಿಂದ ಮುಕ್ತರನ್ನಾಗಿ ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯ. ಅಂದಮೇಲೆ ಬಡಜನರು, ದೀನ ದಲಿತರು ಯಾರಿದ್ದಾರೋ ಅಂಥವರಿಗೆ ನಾವು ಏನು ಕಾಣಿಕೆಯನ್ನು ಕೊಡಬಲ್ಲೆವು ಎಂದಾಗ ಈ ದೇಶದಲ್ಲಿ ಇನ್ನೂ ಸಂಕಟಕ್ಕೆ ಸಿಕ್ಕಿದ ಜನ ಯಾರಿದ್ದಾರೆ ಎನ್ನುವುದನ್ನು ನಿರ್ಧರಿಸುವುದಕ್ಕೊಸ್ಕರವಾಗಿ ನಮ್ಮ ಸರ್ಕಾರದ ವತಿಯಿಂದ ಎರಡು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಗಮನಿಸಬಹುದು. ಒಂದು Small Farmers Development Agency; ಎರಡನೆಯದು Marginal Agricultural Labourers Agency ಈ ಎರಡು ಸಂಸ್ಥೆಗಳು ಕೆಲಸ ಮಾಡುತ್ತಾ ಇವೆ. ಮೊದಲನೆಯದು ಮೈಸೂರು, ಬೀದರ್, ಉತ್ತರ ಕನ್ನಡ, ಬೆಂಗಳೂರು ಜಿಲ್ಲೆಗಳಲ್ಲಿ ೧೯೭೦–೭೧ ರಿಂದ ಕೆಲಸ ಮಾಡುತ್ತಿದೆ, ಇನ್ನು ಎರಡನೇ ಸಂಸ್ಥೆ ಬಿಜಾಪುರ, ತುಮಕೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ೧೯೭೧–೭೨ ರಿಂದ ಕೆಲಸ ಮಾಡುತ್ತಿದೆ. ಇನ್ನು ಎರಡು ಸಂಸ್ಥೆಗಳೂ ಸೇರಿ ಹಾಸನ, ಬಳ್ಳಾರಿ, ಶಿವಮೊಗ್ಗ, ಗುಲ್ಬರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಹೀಗೆ ಇಡೀ ರಾಜ್ಯದಲ್ಲಿ ೧೧ ಜಿಲ್ಲೆಗಳಲ್ಲಿ ಈ ಕೆಲಸ ನಡೆದಿದೆ. ಈ ಸಂಸ್ಥೆಗಳು ಕೆಲಸ ಮಾಡಿದುದರ ಪರಿಣಾಮವಾಗಿ ೩೧–೦೨–೧೯೭೬ಕ್ಕೆ ಸಿಗತಕ್ಕ ಅಂಕಿ ಅಂಶದ ಆಧಾರದಮೇಲೆ ಸ್ಮಾಲ್ ಫಾರ್ಮರ್ಸ್ ಎಂಬ ವರ್ಗಕ್ಕೆ ಸಿಗತಕ್ಕ ಜನ ೯,೦೨೨,೬೫೮ ಜನರು. ನಮ್ಮ ಸರ್ಕಾರದ ಈ ಎರಡು ಸಂಸ್ಥೆಗಳು ೨,೬೪,೪೦೯ ಜನರಿಗೆ ಸಹಾಯ ಒದಗಿಸಿಕೊಟ್ಟಿದೆ. ಆದರೆ ಈ ೧೧ ಜಿಲ್ಲೆಗಳಲ್ಲಿ ಇನ್ನೂ ೭ ಲಕ್ಷಕ್ಕಿಂತಲೂ ಹೆಚ್ಚು ಜನ ಈ ಒಂದು ಸೌಲಭ್ಯಗಳಿಗೆ ಸಿಕ್ಕದೆ ಸಾಲದ ಸಂಕೋಲೆಯಲ್ಲಿ ನರಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇಂಥ ದೀನದಲಿತ ಜನಾಂಗಕ್ಕೆ ದುರ್ಬಲ ವರ್ಗದ ಜನಾಂಗಕ್ಕೆ ನಾವು ಏನು ಸಹಾಯ ಮಾಡಬಹುದು ? ೧೧ ಜಿಲ್ಲೆಗಳಲ್ಲಿ ೭ ಲಕ್ಷ ಜನ ಇಂಥ ದುರ್ಬಲ ವರ್ಗದ ಜನ ಇರುವುದಾದರೆ ಇನ್ನೂ ಇತರ ಜಿಲ್ಲೆಗಳನ್ನೂ ಗಮನಿಸಿದಾಗ ಇದರ ಸಂಖ್ಯೆ ೧೫ ಲಕ್ಷವನ್ನೂ ಮೀರಬಹುದು ಎಂಬ ಊಹೆಗೆ ಅವಕಾಶವಿದೆ. ಇವರ ಸಾಲವನ್ನು ಎಲ್ಲರೀತಿಯಿಂದಲೂ ಮುಕ್ತಗೊಳಿಸಬೇಕು ಎಂದು ನಾನು ಹಿಂದೆ ಕೂಡ ಮಾತನಾಡುವಾಗ ಹೇಳಿದ್ದೆ. ಋಣಮುಕ್ತ ಎಂದರೆ ಅವನ ಸಾಲ ಯಾವುದೇ ಇರಲಿ ಅದರಿಂದ ಅವನು ಮುಕ್ತನಾಗಬೇಕು. ಸರ್ಕಾರದ ಸಾಲ, ಬ್ಯಾಂಕಿನ ಸಾಲ, ಸಹಕಾರ ಸಂಘದ ಸಾಲ, ಯಾವ ಸಾಲವೇ ಇರಬಹುದು, ಎಲ್ಲಾ ರೀತಿಯ ಸಾಲದಿಂದ ಅವನನ್ನು ಮುಕ್ತನನ್ನಾಗಿ ಮಾಡಬೇಕಾದುದು ನಮ್ಮ ಕರ್ತವ್ಯ. ಇಂಥ ಲಕ್ಷಾಂತರ ಜನ ಬ್ಯಾಂಕಿನ, ಸರ್ಕಾರದ, ಸಹಕಾರ ಸಂಘದ ಸಾಲದ ಶೂಲೆಯಲ್ಲಿ ಸಿಕ್ಕಿ ನರಳುತ್ತಿರತಕ್ಕವರನ್ನು ಋಣಮುಕ್ತರನ್ನಾಗಿ ಮಾಡಬೇಕು ಎನ್ನುವ ಅವಕಾಶ ಬಂದಾಗ ಬಡಜನರ ಅಭ್ಯುದಯಕ್ಕಾಗಿ ಅಪೇಕ್ಷಪಡುವಂಥ ಮಹಾಜನತೆ ಇರುವಂಥ ಈ ಸಭೆಯಲ್ಲಿ ಋಣ ಮುಕ್ತರನ್ನಾಗಿ ಮಾಡಬಾರದು ಎಂದು ಹೇಳುವ ನಿರ್ದಯಿ, ನಿಷ್ಕರುಣಿ, ಹೃದಯಪ್ಲುಳ್ಳಂಥ ಮಂತ್ರಿಗಳಾಗಲೀ, ಸದಸ್ಯರಾಗಲೀ ಇರುತ್ತಾರೆಯೇ ಎಂದರೆ ಖಂಡಿತವಾಗಿ ಇರಬಾರದು. ಅಂಥವರು ನಮ್ಮ ಸಭೆಯಲ್ಲಿ ಇರುವುದಕ್ಕೆ ಸುಧ್ಯವೇ ಇಲ್ಲ. ಬಡಜನರ ಉದ್ಧಾರಕ್ಕಾಗಿ, ಅವರಿಗೆ ಉಪಯುಕ್ತವಾಗತಕ್ಕ ನಿರ್ಣಯವನ್ನು ಯಾವುದೇ ವ್ಯಕ್ತಿ ಸಭೆಯಲ್ಲಿ ತಂದಾಗ ಅದು ಅಗಭಾರದು, ನಮ್ಮ ರೈತರಿಗೆ ಸಹಾಯ ದೊರಕಬಾರದು, ಅವರು ಸಾಲದಿಂದ ಮುಕ್ತರಾಗಬಾರದು ಎಂದು ಹೇಳುವಂಥ ನಿರ್ದಯಿ ಹೃದಯ ವುಳ್ಳ ಸದಸ್ಯರು ನಮ್ಮ ಸದನದಲ್ಲಿ ಖಂಡಿತ ಇರುವುದಕ್ಕೆ ಸಾಧ್ಯವಿಲ್ಲ, ಅಂಥವರು ಇಲ್ಲ ಎಂಬ ಭರವಸೆ ನನಗಿವೆ. ಆದ್ದರಿಂದ ಇದು ಸರ್ವಾಮತದಿಂದ ಅಂಗೀಕಾರವಾಗತಕ್ಕ ನಿರ್ಣಯ ಎಂಬುದಕ್ಕೆ ನಾನು ಪೀಠಿಕೆ ಹಾಕುತ್ತಿದ್ದೇನೆ. ಈ ನಿರ್ಣಯವನ್ನು ಯಾರೂ ವಿರೋಧಮಾಡುವುದಿಲ್ಲ ಎಂಬ ನಂಬಿಕೆ ನನಗಿದೆ. ಈ ದೇಶದಲ್ಲಿ ಲಕ್ಷಾಂತರ ರೂಪಾಯಿ ಸಾಲಕ್ಕೆ ಸಿಕ್ಕಿರತಕ್ಕ ಬಡಜನರನ್ನು ಸಾಲದ ಹೊರೆಯಿಂದ ಬಿಡಿಸುವುದು ನಮ್ಮ ಜವಾಬ್ದಾರಿ. ಆದರೆ ಆ ಬಗ್ಗೆ ಹೇಳುವಾಗ ರಾಜ್ಯದ ಒಬ್ಬ ಶಾಸಕನಾಗಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸುವುದು ಅಗತ್ಯವೆಂದು ಯಾರಾದರೂ ಮಂತ್ರಿಗಳಾಗಲೀ, ಸದಸ್ಯರಾಗಲೀ ಹೇಳಬಹುದು. ಅದರ ಬಗ್ಗೆ ನಾನು ಸವಿಾಲೋಚನೆ ಮಾಡಿದ್ದೇನೆ. ಆ ಬಗ್ಗೆ ಹೇಳಬೇಕೆಂದರೆ

ನಮ್ಮ ರಾಜ್ಯದಲ್ಲಿ ಕೇವಲ ೪ ಪರ್ಸೆಂಟ್ ಇರತಕ್ಕ ಅಧಿಕಾರಿವರ್ಗದವರು, ನೌಕರರು ಸಂಕಟದಲ್ಲಿ ಸಿಕ್ಕಿದಾಗ ಅವರಿಗಾಗಿ ಬವಣೆ ಭತ್ಯ ಕೊಡುವುದಕ್ಕಾಗಿ ಒಂದು ವರ್ಷದಲ್ಲಿ ೨೦ ಕೋಟಿ ರೂಪಾಯಿ ವಿರ್ಚು ಮಾಡುವಾಗ ಬಡಜನರಿಗಾಗಿ, ಬಡರೈತರಿಗಾಗಿ ೧೦ ಕೋಟಿ ರೂಪಾಯಿ ವಿರ್ಚು ಮಾಡುವುದಕ್ಕೆ ಹಣ ಇಲ್ಲ ಎಂದು ಹೇಳುವಂಥ ಮೌಢ್ಯದ ಕಡೆಗೆ ಹೋಗುವುದಕ್ಕೆ ನಾನು ತಯಾರಿಲ್ಲ. ನಮ್ಮಲ್ಲಿ ಹಣ ಇದೆ ಎಂಬ ಭರವಸೆ ನನಗಿದೆ. ನಮ್ಮ ಸರ್ಕಾರವೇನೂ ಆಂಥ ಬರಡು ಸರ್ಕಾರ ಅಲ್ಲ. ಎಂಬ ಆತ್ಮ ವಿಶ್ವಾಸವೂ ನನಗಿದೆ. ನಾನು ಈ ಮಾತನ್ನು ಹೇಳುವಾಗ ನೌಕರರಿಗೆ ೨೦ ಕೋಟಿ ರೂಪಾಯಿ ಬವಣೆ ಭತ್ಯವನ್ನು ಕೊಡುವುದನ್ನು ನಾನು ವಿರೋಧಮಾಡುತ್ತೇನೆ ಎಂದು ಭಾವಿಸಬಾರದು. ೨೦ ಕೋಟಿ ರೂಪಾಯಿ ವಿರ್ಚು ಮಾಡುವುದರಿಂದ ನೌಕರರ ಬವಣೆಯನ್ನು ಬಗೆಹರಿಸಿದಂತೆಯು ಆಗುವುದಿಲ್ಲ. ನಮ್ಮಲ್ಲಿರತಕ್ಕ ಸಾವಿರಾರು ರೂಪಾಯಿ ಸಂಬಳ ಪಡೆಯುತಕ್ಕ ಅಧಿಕಾರಿಗಳಿಗೆ ಒಂದು ವಿಶಾಲವಾದ ಮನೆಯನ್ನು ಕೊಟ್ಟು, ಕೇವಲ ೧೦ ಪರ್ಸೆಂಟನ್ನು ಸಂಬಳದಲ್ಲಿ ಹಿಡಿಯತಕ್ಕ ವ್ಯವಸ್ಥೆ ಮಾಡಿದ್ದೀರಿ. ಹಾಗೆಯೇ ರಾಜ್ಯದ ಪ್ರತಿಯೊಬ್ಬ ಸಾಮಾನ್ಯ ನೌಕರನಿಗೂ ಸಂಬಳದ ಶೇಕಡ ೧೦ರಷ್ಟಕ್ಕೆ ಮನೆ ಸಿಗುವಂತಹ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಒಂದು ಕರ್ತವ್ಯ. ಆದರೆ ಆ ಬಗ್ಗೆ ಲಕ್ಷ ಕೊಟ್ಟಿಲ್ಲ. ಒಂದು ವೇಳೆ ಹಾಗೆ ಮಾಡಲು ಸಾಧ್ಯವಿಲ್ಲದಿದ್ದರೆ, ಸರ್ಕಾರೀ ನೌಕರರು ತಮ್ಮ ಮನೆಗೆ ಎಷ್ಟು ಬಾಡಿಗೆಯನ್ನು ಕೊಡುತ್ತಿದ್ದಾರೆ ಅಷ್ಟನ್ನು ಏಕೆ ಈಗ ಕೊಡುತ್ತಿರುವ ಮನೆ ಬಾಡಿಗೆ ಭತ್ಯೆಯ ಜೊತೆಗೆ ತುಂಬಿ ಕೊಡಬಾರದೆಂಬ ಪ್ರಶ್ನೆಯನ್ನು ಸರ್ಕಾರದ ಮುಂದಿಡುತ್ತೇನೆ. ಇದು ಸರ್ಕಾರದ ಕರ್ತವ್ಯವಾಗಬೇಕು. ನಮ್ಮಲ್ಲಿ ಹಣವನ್ನು ಒದಗಿಸತಕ್ಕ ಮೂಲಗಳು ಅನೇಕ ಇವೆ ಎಂಬುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಎರಡನೆಯದಾಗಿ, ಬಜೆಟ್ ಭಾಷಣವನ್ನು ಓದುವಾಗ ಒಂದು ಅಂಶ ನನ್ನ ಗಮನಕ್ಕೆ ಬಂದಿದೆ. ಅದೇನೆಂದರೆ ಇತರ ಕಾಮಗಾರಿ ವೆಚ್ಚಗಳು ಎಂದು ಈ ಬಾಬಿಗೆ ನೂರಾರು ಕೋಟಿ ರೂಪಾಯಿ ವೆಚ್ಚವಾಗುತ್ತಿದೆ ಎಂದು ಇದೆ. ಇತರ ಕಾಮಗಾರಿಗಳ ವಿರ್ಚು ಯಾವುದೆಂದು ನನಗೆ ಗೊತ್ತಾಗಲಿಲ್ಲವೆಂದು ಮಾನ್ಯ ಮಿತ್ರರಾದ ಇಬ್ರಾಹಿಂ ಅವರನ್ನು ಕೇಳಿದೆ. ಅದಕ್ಕೆ ಅವರು ನನಗೂ ಕೂಡ ಗೊತ್ತಾಗಲಿಲ್ಲವೆಂದು ಸ್ವಲ್ಪ ಹೊತ್ತು ಯೋಚನೆ ಮಾಡಿ ಹೇಳಿದರು, ಇದೂ ಯಾವುದೆಂದರೆ ಪೈಸೂರಿನಲ್ಲಿ ಒಂದು ವಸ್ತು ಪ್ರದರ್ಶನ ನಡೆಸುತ್ತಾರೆ ಮತ್ತು ಬೆಂಗಳೂರಿನಲ್ಲಿ ಒಂದು ವಸ್ತು ಪ್ರದರ್ಶನವನ್ನು ನಡೆಸುತ್ತಾರೆಲ್ಲ ಆ ಬಾಬಿಗೆ ಸಂಬಂಧಿಸಿದ್ದು ಎಂದು. ಅದನ್ನು ನಡೆಸುವ ಕಾಲದಲ್ಲಿ ಜಯಲಲಿತ, ಹೇಮಮಾಲಿನಿ ಮುಂತಾದವರನ್ನು ಕರೆಸುತ್ತಾರಲ್ಲ, ಆ ಕಾಮಗಾರಿಯ ವಿರ್ಚು ಎಂದರು.

೧೨.೩೦ ಪಿ.ಎಂ.

ಶ್ರೀ ಪಿ. ರಾಮದೇವ್.—ಕಾಮಗಾರಿಯೋ ಅಥವಾ ಕಾಮಕಾರಿಯೋ, ಸ್ಪಷ್ಟವಾಗಿ ಗೊತ್ತಾಗಲಿಲ್ಲ.

MR. CHAIRMAN.—Probably your resolution concerned about debts rather than about housing problems or Kamagari? Are you trying to give suggestions to the Government?

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಇಬ್ರಾಹಿಂರವರು ಹೇಳಿದಾಗ ನಾನು ಇದನ್ನು ಒಪ್ಪಲಿಲ್ಲ. ಏಕೆಂದರೆ ಹೇಮಾವತಿ ನದಿಗೆ ಕಟ್ಟೆ ಕಟ್ಟುವುದಕ್ಕೆ ಹಣವಿಲ್ಲವೆಂದವರು ಹೇಮಮಾಲಿನಿಯನ್ನು ಏಕೆ ಕರೆಸುತ್ತಾರೆ ಎಂದು. ನನಗೆ ಸಮಾಧಾನವಾಗಲಿಲ್ಲ. ಆಗ ಮಾನ್ಯ ಆನಂದರಾವ್‌ರವರು ಅವರು ಇತರ ಕಾಮಗಾರಿ ಎಂದು ಹೇಳಿದ್ದು ಸರಿ. ಹೀಗೆ ಲಕ್ಷಾಂತರ ರೂಪಾಯಿಗಳನ್ನು ವಿರ್ಚು ಮಾಡಿ ಇತರೆ ಕಾಮಗಾರಿಗಳಿಗಾಗಿ ಎಂದು ಬರೆಯುತ್ತಾರೆ. ಕಾಮಗಾರಿ ಎಂಬುದಕ್ಕೆ ಸರಿಯಾದ ವಿವರಣೆ ಸಿಗುವುದು ಕಷ್ಟ; ಇದನ್ನು ಮಾನ್ಯ ಮಂತ್ರಿಗಳನ್ನು ಕೇಳಿ ಹೇಳಬೇಕೆಂದರು. ಹಣ ವಿರ್ಚು ಮಾಡುವುದಕ್ಕೆ ಸಾಕಷ್ಟು ಒಳ್ಳೆಯ ಸೌಲಭ್ಯಗಳಿವೆ. ಆದ್ದರಿಂದ ಆ ಕಡೆಗೆ ಲಕ್ಷ ಕೊಟ್ಟರೆ ನಿಜವಾಗಿಯೂ ದೇಶದಲ್ಲಿ ಸಂಕಟದಲ್ಲಿರತಕ್ಕೆ ಜನರಿಗೆ ಉಪಯುಕ್ತವಾದ ಸಲಹೆ, ಸಹಕಾರಗಳನ್ನು ಕೊಡುವುದಕ್ಕೆ ಸಾಧ್ಯತೆ ಇದೆ, ಬ್ಯಾಂಕಿನಲ್ಲಿರತಕ್ಕೆ ಹಣವನ್ನು ಕೂಡುವುದಕ್ಕೆ ಅನೇಕ ಶಾಸನಗಳು ಅಡ್ಡಿಬರುತ್ತವೆಂದು ಮಾನ್ಯ ಮಂತ್ರಿಗಳು ಹೇಳಬಹುದು. ಆದರೆ ಸಾರ್ವಜನಿಕರ ಹಣವನ್ನು, ಅವರು ಕೊಟ್ಟಂತಹ ಹಣವನ್ನು ಅವರಿಗೆ ಕೊಡದಂತಹ ಕಾನೂನು ನಮ್ಮ ದೇಶದಲ್ಲಿದೆ. ಯಾವ ರಾಷ್ಟ್ರದಲ್ಲಿಯೂ ಇಲ್ಲದಂತಹ; ಸಾಲವನ್ನು ಅಲ್ಲ, ಕೇವಲ ಮಾತು ಕೊಟ್ಟು ಹಣವನ್ನು ಹಿಂದಿರುಗಿಸುವುದಕಾಗಿ ಹೆಂಡತಿ ಮಕ್ಕಳನ್ನು ಪರಾಜು

ಮಾಡಿದಂತಹ ಸತ್ಯ ಹರಿಶ್ಚಂದ್ರನ ನಿದರ್ಶನ ನಮ್ಮ ದೇಶದಲ್ಲಿದೆ. ಇಂಥ ನಮ್ಮ ನಾಡಿನಲ್ಲಿ ಹುಟ್ಟಿದಂತಹ ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ: ಅವೇನೆಂದರೆ ನತ್ವಹಂಕಾಮಯೇ ರಾಜ್ಯಂ ನಸ್ವರ್ಗಂ ನಾಪುನರ್ಭವಂ'' ಕಾಮಯೇದುಃಖಿತಪ್ತಾನಾಂ ಪ್ರಾಣಾನಾಂ ಆರ್ತನಾಶನಂ, ನನಗೆ ರಾಜ್ಯವೂ ಬೇಡ, ಸ್ವರ್ಗವೂಬೇಡ ಪುಣ್ಯವೂ ಬೇಡ; ತೊಂದರೆಯಲ್ಲಿರತಕ್ಕ ಸಂಕಟದಲ್ಲಿರತಕ್ಕವರ ಕಷ್ಟವನ್ನು ಪರಿಹರಿಸುವಂತಹ ಕೇವಲ ಒಂದು ಅವಕಾಶ ನನಗೆ ಲಭ್ಯವಾದರೆ ಅದೇ ಸಾಕೆಂದು ಹೇಳಿದರು. ಮಹಾತ್ಮಾಗಾಂಧಿಯವರ ತತ್ವವನ್ನು ಹೊತ್ತು ಮೆರೆಯುವಂತಹ ಈ ರಾಷ್ಟ್ರದಲ್ಲಿ ಯಾರೋ ಖಾಸಗೀ ಜನರು ಕೊಟ್ಟಂತಹ ಬಾಂಕಿನಲ್ಲಿರುವ ಹಣವನ್ನು ಬಡಜನರಿಗೆ ಕೊಡುವುದಕ್ಕಾಗುವುದಿಲ್ಲವೇ ? ಆ ಬಗ್ಗೆ ಒಂದು ಶಾಸನವನ್ನು ರಚಿಸಿ ಆ ಕಾರ್ಯವನ್ನು ಮಾಡುವ ಒಂದು ಸಾಮರ್ಥ್ಯ ಇಲ್ಲವೆ ಎಂದು ಪ್ರಶ್ನಿಸುತ್ತೇನೆ? ನಮ್ಮ ಸರ್ಕಾರ ಬರಡು ಸರ್ಕಾರ ಅಲ್ಲ; ಹೃದಯ ಹೀನ ಸರ್ಕಾರ ಅಲ್ಲ, ಶ್ರೀಮಂತ ಸರ್ಕಾರವೆಂದು ಅಭಿಮಾನದಿಂದ ಹೇಳುತ್ತೇನೆ. ೧೨೦ ಕೋಟಿಗಿಂತ ಮಿಗಿಲಾದ ಡಿಫಿಸಿಟಿ ಬಜೆಟನ್ನು ಮಂಡಿಸಿದ್ದರೆಂಬ ಬಗ್ಗೆ ಸಂಶಯ ಇದೆ. ಅದಕ್ಕೆ ಯಾವ ಶಾಸನವೂ ಅಡ್ಡಿ ಬರಲಿಲ್ಲವೆ? ಬಡವರಿಗೆ ಒದಗಿಸತಕ್ಕ ಸೌಲಭ್ಯವನ್ನು ಕೊಡುವುದಕ್ಕೆ ಅಸಕ್ತರಾದರೆ; ಅವರು ಬ್ಯಾಂಕಿನಿಂದ ಕೊಟ್ಟಂತಹ ಹಣವನ್ನು ಪರಿಹರಿಸುವುದಕ್ಕೆ ಅಸಾಧ್ಯವಾದರೆ, ಸಹಕಾರ ಸಂಘಗಳು ಕೊಟ್ಟಂತಹ ಹಣವನ್ನು ಪರಿಹರಿಸುವುದಕ್ಕೆ ಅಸಾಧ್ಯವಾದರೆ ಸರ್ಕಾರವೇ ಏಕೆ ಈ ಹಣವನ್ನು ತುಂಬಿ ಕೊಡಬಾರದೆಂದು ಕೇಳುತ್ತೇನೆ. ಹೀಗೆ ತುಂಬಿ ಕೊಟ್ಟು, ಬಡ ರೈತನನ್ನು ಋಣದಿಂದ ಏಕೆ ಮುಕ್ತನನ್ನಾಗಿ ಮಾಡಬಾರದು? ನನ್ನ ವಿದ್ಯಾರ್ಥಿ ಜೀವನದಲ್ಲಿ ನಡೆದಂತಹ ಒಂದು ಘಟನೆಯನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಮನೆಯಲ್ಲಿ, ಆ ಮನೆಯ ಯಜಮಾನ ಇರಲಿಲ್ಲ, ಯಜಮಾನಿ ಇದ್ದಳು. ಆ ಮನೆಗೆ ಹೊಸದಾಗಿ ಸೊಸೆ ಬಂದಿದ್ದಾಳೆ, ಅವಳು ಒಂದು ದಿನ ಬಾಗಿಲ ಬಳಿ ನಿಂತಿದ್ದಾಳೆ; ಆಗ ಒಬ್ಬ ಭಿಕ್ಷುಕ ಬಂದು ಭಿಕ್ಷೆ ಕೇಳಲು ಆ ಸೊಸೆ ಆ ಭಿಕ್ಷುಕನನ್ನು ಕುರಿತು ಮುಂದೆ ಹೋಗು ಎಂದು ಹೇಳಿದಳು. ಅಷ್ಟರಲ್ಲಿ ಆ ಮಾತನ್ನು ಕೇಳಿದ ಅತ್ತೆ ಒಳಗಿನಿಂದ ಹೊರಬಂದು ಆ ಭಿಕ್ಷುಕನನ್ನು ಕರೆಸಿ ಹೇಳುತ್ತಾಳೆ, ನಾನು ಈ ಮನೆ ಯಜಮಾನಿ. ನನ್ನ ಸೊಸೆ ಅಲ್ಲ. ಈಗತಾನೇ ಹೊಸದಾಗಿ ಬಂದಿರುವ ಈ ಸೊಸೆಗಿನ್ನೂ ಬೀಗದ ಕೀಯನ್ನು ಕೊಟ್ಟಿಲ್ಲ. ಈಗ ನಮ್ಮ ಮನೆಯಲ್ಲಿ ಭಿಕ್ಷೆ ಕೊಡುವುದಿಲ್ಲ, ಮುಂದೆ ಹೋಗು ಎಂದು ಹೇಳಿಕಳುಹಿಸಿದಳು ಆ ಅತ್ತೆ. ಹೀಗಾಗಿ ಕೊನೆಗೂ ಆ ಭಿಕ್ಷುಕನಿಗೆ ಭಿಕ್ಷೆ ಸಿಗಲಿಲ್ಲ. ಬಡ ರೈತನನ್ನೇನೊ ಇತರರ ಋಣದಿಂದ ಮುಕ್ತನನ್ನಾಗಿ ಮಾಡಿದ್ದೀರಿ, ಆದರೆ ಸರ್ಕಾರದಿಂದಲಾಗಲೀ, ಅಥವಾ ಸಹಕಾರ ಸಂಘದಿಂದಲಾಗಲೀ ಕೊಟ್ಟಂತಹ ಸಾಲದಿಂದ ಏಕೆ ಮುಕ್ತನನ್ನಾಗಿ ಮಾಡಲಿಲ್ಲ ಎಂದು ಕೇಳುತ್ತೇನೆ. ನೀವು ಮಾಡಿರುವುದು ಈಗ ನಾನು ಹೇಳಿದ ಕಥೆಯ ಹಾಗೆ ಆಗಿದೆ. ಆ ಸಾಲದಿಂದ ಅವನು ಮುಕ್ತನಾಗತಕ್ಕ ವ್ಯವಸ್ಥೆಯನ್ನು ನೀವು ಮಾಡಬೇಕಾಗಿದೆ. ಈ ಒಂದು ದೃಷ್ಟಿಯನ್ನು ತಾವು ಗಮನದಲ್ಲಿಟ್ಟುಕೊಂಡು ಇನ್ನೊಬ್ಬರ ಹಣವನ್ನು ಕೊಡಬಾರದೆಂದು ಹೇಳತಕ್ಕದ್ದು ಸರಿಯೇ ತಪ್ಪೇ ಎಂಬುದನ್ನು ನೋಡಬೇಕು. ಈ ನಮ್ಮ ಸದನದಲ್ಲಿ ವಕೀಲರಾಗಿರತಕ್ಕವರು ಅನೇಕ ಮಂದಿ ಶಾಸಕರಿದ್ದಾರೆ, ಮತ್ತು ಅನೇಕ ಮಂದಿ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದವರು ಇದ್ದಾರೆ ಈ ಸಂದರ್ಭದಲ್ಲಿ, ನನ್ನ ಸ್ವಂತ ಅನುಭವದ ಒಂದು ಉದಾಹರಣೆಯನ್ನು ಹೇಳುತ್ತೇನೆ. ಈ ಶಾಸನ ಬಂದ ೩-೪ ದಿನದ ನಂತರ ನನ್ನ ಬಳಿ ೫ ಮಕ್ಕಳನ್ನುಳ್ಳ ಒಬ್ಬ ಹರಿಜನ ಜೊತೆಯಲ್ಲಿ ಒಂದು ಪತ್ರವನ್ನು ತೆಗೆದುಕೊಂಡು ಬಂದ. ಅವನು ಒಂದೂವರೆ ಸಾವಿರ ರೂಪಾಯಿಗೆ ಅರ್ಧ ಎಕರೆ ನೀರಾವರಿ ಜಮೀನನ್ನು ಭೋಗ್ಯ ಮಾಡಿಕೊಂಡಿದ್ದ, ಭೋಗ್ಯ ಮಾಡಿಕೊಂಡು ಕೇವಲ ೩ ತಿಂಗಳು ಆಗಿತ್ತು. ಅವನು ಅವನ ಹತ್ತಿರ ಇದ್ದಲ್ಲಿ ಎಕರೆ ಬಿಜ್ಜಿ ಜಮೀನನ್ನು ೨ ಸಾವಿರ ರೂಪಾಯಿಗೆ ಮಾರಿ ನನ್ನ ಮಕ್ಕಳಿಗೆ ಅನ್ನ ಕೊಡಬೇಕೆಂದು ಯಾರೋ ಒಬ್ಬರ ಹತ್ತಿರ ಇದ್ದ ಒಂದು ಎಕರೆ ಜಮೀನಿನಲ್ಲಿ ಜಿರ್ದ ಎಕರೆ ಜಮೀನನ್ನು ೧೫೦೦ರೂಪಾಗಳಿಗೆ ಭೋಗ್ಯಕ್ಕೆ ಮಾಡಿಕೊಂಡು ಇನ್ನು ೫೦೦ ರೂಪಾಯಿ ಅದರ ರಿಜಿಸ್ಟ್ರೇಷನ್ನಿಗೆ ಖರ್ಚಾಗಿತ್ತು. ಈಗ ಋಣ ಪರಿಹಾರ ಕಾಯಿದೆ ಬಂದಿದೆಯಲ್ಲ, ಈಗ ನಾನು ಏನು ಮಾಡಲಿ ಎಂದು ಕೇಳಿದ. ಅದಕ್ಕೆ ನಾನು ಹೇಳಿದೆ, ನೀನು ಯಾರಿಗೆ ಪತ್ರವನ್ನು ಬರೆದು ಕೊಟ್ಟಿದ್ದೀಯೋ ಅವನನ್ನು ಮನೆಗೆ ಕರೆದು ಔತಣ ಏರ್ಪಡಿಸಿ, ಫಲತಾಂಬೂಲ ಕೊಟ್ಟು ಪಾಪಸ್ಸು ಕೊಟ್ಟು ಕಳುಹಿಸು ಎಂದು. ನಾನು ಯಾವುದೋ ದೃಷ್ಟಿಯಿಂದ ಹೇಳಿದ್ದರೆ, ಅವನು ಇದ್ದಕ್ಕಿದ್ದ ಹಾಗೆ ಕುಸಿದು ಬಿದ್ದ. ೫ ಮಕ್ಕಳಿಗೆ ಅನ್ನ ಕೊಡುವ ಸಲುವಾಗಿ ಹೊಲವನ್ನು ಮಾರಿ ತರಿ ಜಮೀನನ್ನು ಭೋಗ್ಯಕ್ಕೆ ಮಾಡಿಕೊಂಡವನಿಗೆ ಶಾಸನ ಬಂದ ಕೂಡಲೇ ಇಂಥ ಪರಿಸ್ಥಿತಿ ಬಂದರೆ ಆ ೫ ಮಕ್ಕಳ ಪರಿಸ್ಥಿತಿಯಾದರೂ ಏನಾಗಬೇಕು? ಇದನ್ನು ನಾವು ನೋಡುತ್ತಿಲ್ಲ. ಶಾಸನ ಮಾಡುವಾಗ ಆಲೋಚನೆ ಮಾಡಬೇಕಾಗಿತ್ತು. ಯಾರು ಸಾಲವನ್ನು ಕೊಡುವಲ್ಲಿ ಸಂತ್ರಸ್ತ

ರಾಗಿದ್ದಾರೋ, ಸಂಕಟಕ್ಕೆ ಸಿಕ್ಕಿದ್ದಾರೋ ಅವರಿಗೆ ಪರಿಹಾರವನ್ನು ಒದಗಿಸಿಕೊಡತಕ್ಕ ಅವಕಾಶ ಈ ಶಾಸನದಲ್ಲಿ ಇರಬೇಕಾಗಿತ್ತು. ಒಬ್ಬ ಬಡವನನ್ನು ಬಲಿ ಹೊಡದು ಇನ್ನೊಬ್ಬನನ್ನು ಉದ್ಧರಿಸುವುದು ಸರ್ಕಾರದ ಧರ್ಮವಲ್ಲ, ನೀತಿಯಲ್ಲ. ಎಲ್ಲ ಬಡವರನ್ನು ಸಮತೋಲನ ದೃಷ್ಟಿಯಿಂದ ಉದ್ಧರಿಸುವ ಮನೋಭಾವ, ಯಾವುದೇ ಆಡಳಿತ ವರ್ಗವಾದರೂ ಅದಕ್ಕೆ ಇರಬೇಕು.

ಆದರೆ ಬಡವರಿಗೆ ಅನುಕೂಲವಾಗತಕ್ಕಂಥಾ ಶಾಸನ ಆಗಲಿಲ್ಲ. ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ ನಮ್ಮ ರಾಜ್ಯದಲ್ಲಿ ಬಡಜನರು ಏನು ಇದ್ದಾರೆ ೧೫ ಲಕ್ಷ ಬಡ ಜನರು ಅವರು ಈವೃತ್ತಿನ ದಿವಸ ಬ್ಯಾಂಕ್‌ಗಳಲ್ಲಿ ಸರಕಾರ ಹಾಗೂ ಸಹಕಾರ ಸಂಘಗಳಲ್ಲಿ ಸಾಲದಲ್ಲಿ ಸಿಕ್ಕಿ ಕೊಂಡಿದ್ದಾರೆ. ಅವರು ತಮ್ಮ ಧರ್ಮ ಪತ್ನಿಯರ ಮಾಂಗಲ್ಯವನ್ನು ಮಾರಿ ಆ ಸಾಲವನ್ನು ತೀರಿಸಬೇಕಾಗಿದೆ, ಆ ಬಡಜನರನ್ನು ಋಣ ಮುಕ್ತರನ್ನಾಗಿ ಮಾಡುವುದಕ್ಕೆ ಅವರ ಕೈ ಬಲಪಡಿಸುವುದಕ್ಕೆ ಒಂದು ಶಾಸನ ಮಾಡುವುದನ್ನು ನೀವು ಬೇಕು ಅನ್ನುವಿರೋ ಅಥವಾ ಬೇಡ ಅನ್ನುವಿರೋ ಅನ್ನುವ ಮಾತನ್ನು ನಾನು ಕೇಳಬೇಕಾಗಿದೆ. ಈ ಬಗ್ಗೆ ಶಾಸನ ಮಾಡುವಾಗ ತೊಡಕು ಬರಬಹುದು. ಆದರೆ ನಾವು ಶಾಸನವನ್ನು ಕೊಲ್ಲುವವರಲ್ಲ, ನಾವು ಶಾಸನದ ಯಜಮಾನರು, ನಾವು ಶಾಸನವನ್ನು ರಚಿಸುವವರು. ಆದರಲ್ಲಿ ತೊಡಕುಗಳು ಏನೇ ಬಂದರೂ ಅದಕ್ಕೆ ಸರಿಯಾದ ಶಾಸನವನ್ನು ರಚಿಸುವಂಥಾ ಸಾಮರ್ಥ್ಯ ನಮಗೆ ಇದೆ. ಈ ಒಂದು ದೃಷ್ಟಿಯನಿಟ್ಟುಕೊಂಡು ನಮ್ಮ ಸರ್ಕಾರ ಆ ಬಡಜನರಿಗೆ ಸೂಕ್ತವಾದಂಥಾ ಶಾಸನವನ್ನು ರಚಿಸಿ ಮಾಡಿ ಅವರನ್ನು ಋಣ ಮುಕ್ತರನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಈಗ ಇರುವಂಥಾ ಋಣ ಪರಿಹಾರ ಕಾಯಿದೆಗೆ ಏನು ತಿದ್ದುಪಡಿಗಳು ಬೇಕೋ ಅದನ್ನು ಆಳವಡಿಸಿ ಒಂದು ಹೊಸ ಶಾಸನವನ್ನು ಜಾರಿಗೆ ತಂದು ರಾಜ್ಯದಲ್ಲಿರುವ ೧೫ ಲಕ್ಷ ಜನ ಬಡ ಜನತೆಗೆ ಏನು ಇದ್ದಾರೋ, ಅವರನ್ನು ಉದ್ಧಾರ ಮಾಡಿ. ಬ್ಯಾಂಕ್‌ಗಳಿಂದ ಮತ್ತು ಸರ್ಕಾರ ಮಾನ್ಯ ಸಹಕಾರ ಸಂಘಗಳಿಂದ ತೆಗೆದುಕೊಂಡಿರತಕ್ಕಂಥಾ ಸಾಲಗಳಿಂದ ಸಾಮಾಜಿಕ ದುರ್ಬಲವರ್ಗದವರನ್ನು ಮುಕ್ತ ಗೊಳಿಸುವಂತೆ ಸೂಕ್ತವಾದ ಒಂದು ತಿದ್ದುಪಡಿ ತಂದು ಆ ಬಡವರ ಕೈಗೆ ಶಾಶ್ವರಾಗಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಮಂಡಿಸುತ್ತೇನೆ.

†ಶ್ರೀ ಕೆ. ವೆಂಕಟರಾಮಯ್ಯ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಈವೃತ್ತಿನ ದಿವಸ ಮಾನ್ಯ ಸದಸ್ಯರು ತಂದಿರತಕ್ಕಂಥಾ ನಿರ್ಣಯ ಏನು ಇದೆ ಋಣ ಪರಿಹಾರ ಮತ್ತು ಸಹಕಾರ ಹಾಗೂ ಸರಕಾರ ಮತ್ತು ಬ್ಯಾಂಕುಗಳಲ್ಲಿ ಹಿಂದುಳಿದ ವರ್ಗದವರು ತೆಗೆದುಕೊಂಡಿರತಕ್ಕಂಥಾ ಸಾಲವನ್ನು ಮುಕ್ತ ಗೊಳಿಸಬೇಕು ಎಂದು ಏನು ಹೇಳುತ್ತಿದ್ದಾತೆ ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ನಾವು ಇಲ್ಲಿಗೆ ಬಂದಿರುವುದು ಸಾಹುಕಾರರ ಪ್ರತಿನಿಧಿಯಾಗಿ ಬಂದಿಲ್ಲ, ಬಡವರ ಪ್ರತಿನಿಧಿಯಾಗಿ ನಾವು ಇಲ್ಲಿಗೆ ಬಂದಿದ್ದೇವೆ. ನಮ್ಮ ಧ್ಯೇಯೋದ್ಧೋರಣೆಗಳು ಬಡವರಿಗೆ ಅಂದರೆ ದುರ್ಬಲವರ್ಗದವರಿಗೆ ಸಹಾಯ ಮಾಡಬೇಕು ಎಂದು ಇದೆ. ಮಾನ್ಯ ಸದಸ್ಯರ ಧೋರಣೆ ಸಾಹುಕಾರರನ್ನು ಇನ್ನೂ ಹೆಚ್ಚು ವಂತರನ್ನಾಗಿ ಮಾಡುವ ಉದ್ದೇಶವಾಗಿದೆ ಸಹಕಾರ ಸಂಘಗಳಲ್ಲಿ, ಸೊಸೈಟಿಗಳಲ್ಲಿ ತೆಗೆದುಕೊಂಡಿರ ತಕ್ಕಂಥಾ ಸಾಲಗಳನ್ನೂ ನೋಡಿ, ಸಾಹುಕಾರರ ಹತ್ತಿರ ತೆಗೆದುಕೊಂಡಿರತಕ್ಕಂಥಾ ಸಾಲಗಳನ್ನೂ ನೋಡಿ. ಸಾಹುಕಾರರು ಜಾತೀಯತೆ ಮತ್ತು ಹೊಲ ಮುಂತಾದವುಗಳನ್ನು ನೆ ಡಿ ಅಂಥಾವರಿಗೆ ಸಹಾಯ ಮಾಡಿರುತ್ತಾರೆ. ಅಂಥಾವರನ್ನು ನಾವು ಋಣ ಮುಕ್ತರನ್ನಾಗಿ ಮಾಡಿದ್ದೇವೆ. ಸಾಹು ಕಾರರು ಅಂಥಾವರಿಗೆ ಒಂದಕ್ಕೆ ಎರಡು ಪಟ್ಟುಬಡ್ಡಿ ಹಾಕಿ ಅವನ ಹತ್ತಿರ, ೧೦೦ ರೂಪಾಯಿಗೆ ೪೮ ರೂಪಾಯಿನಂತೆ ಬಡ್ಡಿ ಹಾಕಿ ಅವನ ಹತ್ತಿರ ದುಬಾರಿ ಹಣವನ್ನು ವಸೂಲ್ಮಾಡುತ್ತಿದ್ದರು. ಆದುದ ರಿಂದ ಅಂಥಾವರಿಂದ ಋಣ ಮುಕ್ತರಾಗಬೇಕು ಎಂದು ನಾವು ಶಾಸನಮಾಡಿದ್ದು. ಬ್ಯಾಂಕ್‌ನಲ್ಲಾದರೆ ೧೦೦ ರೂಪಾಯಿಗಳ ಮೇಲೆ ೬-೬ ರೂಪಾಯಿ ಬಡ್ಡಿ ಪೇರಿಗೆ ಅವರುಗಳಿಗೆ ಸಾಲ ಕೊಟ್ಟು ಸಹಾಯ ಮಾಡು ತ್ತಿರುವಾಗ ಬ್ಯಾಂಕುಗಳಿಂದ ತೆಗೆದುಕೊಂಡಿರತಕ್ಕಂಥಾ ಸಾಲಗಳಿಗೂ ಕೂಡ ಚಕ್ರೂರ್ ಮಾಡಬೇಕು ಎಂದು ಹೇಳಿದರೆ ಇಂಥಾ ನಿರ್ಣಯವನ್ನು ಖಂಡಿತವಾಗಿ ಒಪ್ಪಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ನಾನು ಈ ನಿರ್ಣಯವನ್ನು ವಿರೋಧಿಸುತ್ತೇನೆ. ನಮ್ಮ ಆದಳಿತದ ಧ್ಯೇಯೋದ್ಧೋರಣೆಗಳ ಬಡವರಿಗೆ ಸಹಾಯ ಮಾಡಬೇಕು ಅಂತ ಈ ಒಂದು ಋಣ ಪರಿಹಾರ ಮಸೂದೆ ತಂದಿರತಕ್ಕಂಥಾ ಉದ್ದೇಶ. ಬ್ಯಾಂಕುಗಳಲ್ಲಿ, ಮತ್ತು ಸಹಕಾರ ಸಂಘಗಳಲ್ಲಿ, ಸೊಸೈಟಿಗಳಲ್ಲಿ ಹಾಗೂ ಸರ್ಕಾರದಲ್ಲಿ ತೆಗೆದುಕೊಂಡಿರತಕ್ಕಂಥಾ ಸಾಲ ಗಳನ್ನು ಯಾರು ಯಾರು ತೆಗೆದುಕೊಂಡಿದ್ದಾರೆ ಅನ್ನುವುದನ್ನೂ ಕೂಡ ನಾವು ನೋಡುತ್ತಾ ಇದ್ದೇವೆ. ಅಲ್ಲಿ ತೆಗೆದುಕೊಂಡಿರತಕ್ಕಂಥಾವರು ದೊಡ್ಡ ದೊಡ್ಡ ಶ್ರೀಮಂತರು ಇನ್ನು ಇತರೇ ವೈರಕ್ಟರುಗಳು ತೆಗೆದು

ಕೊಂಡಿದ್ದಾರೆ. ಅವರು ೪ ರೂಪಾಯಿ ಬಡ್ಡಿ ಮೇಲೆ ೮೦ ಲಕ್ಷದವರೆಗೂ ಸಹ ಸಾಲ ತೆಗೆದುಕೊಂಡಿದ್ದಾರೆ. ಅಂಥಾವರನ್ನು ಈ ನಿಮ್ಮ ನಿರ್ಣಯದಿಂದ ಋಣ ಪರಿಹಾರ ಮಾಡಬೇಕೇ, ಅವರು ಏನಾದರೂ ಬಡವರೇ. ಅಂಥಾವರನ್ನು ಇದರಿಂದ ಋಣ ಮುಕ್ತರನ್ನಾಗಿ ಮಾಡಿ ನಮ್ಮ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಬೇಕು ಅನ್ನುವ ಉದ್ದೇಶದಿಂದ ಈ ಒಂದು ನಿರ್ಣಯ ತಂದಿರುವುದರಿಂದ ನಾನು ಇದನ್ನು ವಿರೋಧಿಸುತ್ತೇನೆ. ಋಣ ಪರಿಹಾರ ಮಸೂದೆ ತಂದಿರುವ ಉದ್ದೇಶ ಹಿಂದುಳಿದ ವರ್ಗದವರನ್ನು ಇದರಿಂದ ಉದ್ಧಾರ ಮಾಡಬೇಕೇ ವಿನಾ ಬ್ಯಾಂಕುಗಳಿಂದ ಹಣ ತೆಗೆದುಕೊಂಡಿರತಕ್ಕಂಥಾ ಶ್ರೀಮಂತರಿಗೆ ಸಹಾಯ ಮಾಡಬಾರದು ಅನ್ನುವುದು ನಮ್ಮ ಉದ್ದೇಶವಾಗಿ. ಇಷ್ಟು ಹೇಳಿ ಈ ನಿರ್ಣಯವನ್ನು ವಿರೋಧಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).— ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಗಂಗಾಧರನ್ ಅವರು ತಂದಿರತಕ್ಕಂಥಾ ಈ ನಿರ್ಣಯ ಅವರ ಒಂದು ವಾದ ಲಾಯರ್ ವಾದ ಏನು ಇದೆ ಈ ವಕೀಲ ವೃತ್ತಿಯಿಂದ ಇದಕ್ಕೇನೂ ಪ್ರಯೋಜನವಾಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಮೊಟ್ಟ ಮೊದಲನೆಯದಾಗಿ ಈ ಋಣ ಪರಿಹಾರ ಕಾಯಿದೆ ಏನು ಇದೆ ಇದರ ವಿಚಾರವಾಗಿ ನಾವು ಆಲೋಚನೆ ಮಾಡಿ ನೋಡಿದರೆ ಇದರಲ್ಲಿ ಎರಡು ವಿಚಾರ ನಮ್ಮ ಮುಂದೆ ಬರುತ್ತವೆ. ಇದರಲ್ಲಿ ಒಂದನೆಯದಾಗಿ ಕಾಯಿದೆಗೆ ಸಂಬಂಧಪಟ್ಟದ್ದು, ಇನ್ನೊಂದು ಧರ್ಮ ಮತ್ತು ನೀತಿಗೆ ಸಂಬಂಧಪಟ್ಟದ್ದು. ಈ ಋಣ ಪರಿಹಾರ ಮಸೂದೆ ಈ ಸಭೆಯಲ್ಲಿ ಚರ್ಚೆಯಾಗುತ್ತಾ ಇದ್ದಂಥಾ ಕಾಲದಲ್ಲಿ ಇದರಲ್ಲಿ ಭಾಗವಹಿಸಿದವರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ಈ ಒಂದು ವಿಚಾರವನ್ನು ಸರ್ಕಾರದ ಮುಂದೆ ಮತ್ತು ಮಾನ್ಯ ಸದಸ್ಯರ ಮುಂದೆ ತರುವುದಕ್ಕೆ ಇಷ್ಟಪಡುತ್ತೇನೆ. ಇದು ಬಡವರಿಗೆ ಅನುಕೂಲವಾಗತಕ್ಕಂಥಾ ಮಸೂದೆ ಎಂದು ಕಂಡುಬಂದರೂ ಕೂಡ, ಈ ಕಾಯಿದೆಯನ್ನು ಆಚರಣೆಗೆ ತಂದಂಥಾ ಕಾಲ ಯಾವುದು ಎಂದರೆ ಹುಚ್ಚು ಕಾಲದಲ್ಲಿ, ದೇಶಕ್ಕೆ ಎಮರ್ಜೆನ್ಸಿ ಬಂದ ಸಮಯದಲ್ಲಿ. ಮತ್ತು ೨೦ ಅಂಶಗಳ ಕಾರ್ಯಕ್ರಮದ ಹುಚ್ಚು ಕಾಲದಲ್ಲಿ ಇದು ಜಾರಿಗೆ ಬಂದದ್ದು. ಈ ಸಂದರ್ಭದಲ್ಲಿ ಅನೇಕ ನಿರ್ದೋಷಿಗಳು ಲುಟಿಯೂ ಕೂಡ ಆಯಿತು. ಈ ಒಂದು ಕಾಯಿದೆಯಿಂದ ಪ್ರೋಲೀಸಿನವರು ಕೆಲವರನ್ನು ಜೈಲಿನಲ್ಲಿ ಇಟ್ಟರು. ಕೆಲವರು ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಂಡರು. ಅದೇನೇ ಇದರ ಬಗ್ಗೆ ನನ್ನ ನಿಲುವಾದರೂ ಇಷ್ಟೆ. ಯಾವ ಕಾಯಿದೆಯೇ ಆಗಲಿ ಹಾವು ಬಡಿದು ಹದ್ದಿಗೆ ಹಾಕುವಂಥಾ ನೀತಿ ಏನು ಇದೆ ಅದು ಸರಿಯಾದುದಲ್ಲ ಎಂದು ನನಗೆ ಅನಿಸುತ್ತದೆ. ಸಾಲ ಕೊಟ್ಟಿರತಕ್ಕಂಥಾ ಅನೇಕ ಮಾರ್ವಾಡಿಗಳು, ಪೆಚ್ಚಿನ ಒಂದು ಬಡ್ಡಿ ಹಾಕಿ ಅನೇಕ ಒಡ ಸಂಸಾರಗಳನ್ನು ಹಾಳು ಮಾಡಿರತಕ್ಕಂಥಾದ್ದನ್ನು ನಾವು ಕಂಡಿದ್ದೇವೆ. ಆದರೆ ಯಾವನಾದರೂ ಒಬ್ಬ ಒಳ್ಳೆಯ ಕೆಲಸ ಮಾಡಬೇಕೆಂದಿದ್ದರೂ ಕೂಡ ಅಂಥಾವನಿಗೂ ಸಹ ಈ ಒಂದು ಕಾಯಿದೆಯಿಂದ ತೊಂದರೆಯಾಗಿದೆ. ಇದರಿಂದ ಅನೇಕ ಜನಗಳಿಗೆ ಸಾಲ ಸಿಗುವುದು ಬಹಳ ಕಷ್ಟವಾಗಿದೆ. ಇದರಿಂದ ಒಂದು ತೊಡಕು ಏನು ಇದೆ ಎಂದರೆ ಕಷ್ಟಕಾಲದಲ್ಲಿ ಯಾವನಿಗಾದರೂ ಹಣ ಸಿಕ್ಕುತ್ತಾ ಇದ್ದುದು ಈಗ ತಪ್ಪಿಹೋಗಿದೆ. ಈ ಬಗ್ಗೆ ಸರ್ಕಾರದವರು ಆಲೋಚನೆ ಮಾಡಿ ಅವರಿಗೆ ಕಷ್ಟ ಕಾಲದಲ್ಲಿ ಯಾವ ಒಂದು ರೂಪವಾಗಿಯಾದರೂ ಸಾಲ ಒದಗಿಸಿಕೊಡತಕ್ಕಂಥಾ ಏರ್ಪಾಡು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಬಡವರಿಗೆ ಕೋಆಪರೇಟೀವ್ ಸೊಸೈಟಿಗಳ ಮುಖಾಂತರವಾಗಲಿ, ಬೇರೆಯವರ ಮುಖಾಂತರವಾಗಲಿ ಅವರಿಗೆ ಕಷ್ಟಕಾಲದಲ್ಲಿ ಸಾಲ ಒದಗಿಸಿಕೊಡದೇಹೋದರೆ ಬಹಳ ಕಷ್ಟವಾಗುತ್ತದೆ. ನಿರ್ಗತಿಕರಾದಂಥಾ ಬಡವರಿಗೆ ಬ್ಯಾಂಕ್‌ಗಳ ಮುಖಾಂತರ ವಾಗಲಿ ಸೊಸೈಟಿಗಳ ಮುಖಾಂತರವಾಗಿ ಅವರು ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡುವುದಕ್ಕೆ ತಕ್ಕ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡದೇ ಹೋದರೆ ಈ ಡೆಟ್ ರಿಲೀಫ್ ಆಕ್ಟ್‌ನಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳುತ್ತೇನೆ. ಹಾಗೆಯೇ ಈಗ ಲ್ಯಾಂಡ್ ರೀಫಾರಂಸ್ ಏನು ತಂದಿದ್ದೀರೋ ಈ ಬಗ್ಗೆಯೂ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳುತ್ತೇನೆ. ಅವರಿಗೆ ಸಕಾಲದಲ್ಲಿ ಕಷ್ಟವಾಗಿರುವಾಗ, ಬೇರೆ ಯಾವ ಕಡೆಯಿಂದಲಾದರೂ ಕೂಡ ಅವರಿಗೆ ಹಣ ಸಿಗುವ ಹಾಗೆ ಒಂದು ಬದಲಿ ವ್ಯವಸ್ಥೆ ಮಾಡದೇ ಹೋದರೆ ಈಗ ತಂದಿರತಕ್ಕಂಥಾ ಋಣ ಪರಿಹಾರ ಕಾಯಿದೆಯಿಂದ ಅನುಕೂಲವಾಗುವ ಬದಲು ಅನಾನುಕೂಲವಾಗುತ್ತದೆ ಎಂದು ಮಾನ್ಯ ಸದಸ್ಯರು ತಂದಿರತಕ್ಕಂಥಾ ನಿರ್ಣಯದಿಂದ ನನಗೆ ಅನಿಸುತ್ತದೆ. ಒಂದು ಕಾಲದಲ್ಲಿ ಮಾರ್ವಾಡಿಗಳು ಬಡವರಿಗೆ ೧೦೦ ರೂಪಾಯಿಗೆ ೧೮ ಪರ್ಸೆಂಟ್ ಮತ್ತು ೨೦ ಪರ್ಸೆಂಟ್ ಬಡ್ಡಿ ಏನು ಹಾಕುತ್ತಿದ್ದರೋ, ಆದೇ ಬಡ್ಡಿಯನ್ನು ಈಗ ಬ್ಯಾಂಕ್‌ನವರು, ಕೋಆಪರೆಟೀವ್ ಸೊಸೈಟಿಗಳವರು ಹಾಕುತ್ತಿದ್ದಾರೆ. ಇದರಿಂದ ಬಡವರಿಗೆ ತುಂಬ

ಪೆಟ್ಟು ಬೀಳುತ್ತದೆ. ಆದುದರಿಂದ ಈ ಬಗ್ಗೆ ನನಗೆ ಏನು ಅನಿಸುತ್ತದೆ ಎಂದರೆ ಆ ಬಡವರು ಈ ಬ್ಯಾಂಕುಗಳಲ್ಲಿ ಮತ್ತು ಸಹಕಾರ ಸಂಘಗಳಲ್ಲಿ ಏನು ಸಾಲಸೋಲಗಳನ್ನು ತೆಗೆದುಕೊಂಡಿರುತ್ತಾರೋ ಅವರಿಗೆ ಸ್ವಲ್ಪ ಬಡ್ಡಿ ದರವನ್ನು ಇಳಿಸಿ ಬಡವರಿಗೆ ಸಹಾಯ ಮಾಡಿ, ಅದೇ ಕೈಗಾರಿಕಾ ಕ್ಷೇತ್ರಕ್ಕಾದರೆ ಬೇರೆ ಬಡ್ಡಿ ಪಾಕ. ಬಡವರಿಗೆ ಹೆಚ್ಚಿನ ರೀತಿಯಲ್ಲಿ ಬ್ಯಾಂಕುಗಳಲ್ಲಿ ಮತ್ತು ಸಹಕಾರ ಸಂಘಗಳಲ್ಲಿ ಸಹಾಯವಾಗಬೇಕಾಗುವುದರಿಂದ ಆದರಲ್ಲಿ ತೆಗೆದುಕೊಂಡಿರತ್ಕಂಥಾ ಸಾಲವನ್ನು ಕೊಡಲೇಬೇಡಿ ಎಂದು ಹೇಳತಕ್ಕದ್ದು ಅಷ್ಟು ಸರಿಯಾದುದಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

† ಶ್ರೀ ಬಿ. ರಾಮಯ್ಯ (ಶೃಂಗೇರಿ).— ಮಾನ್ಯ ಅಧ್ಯಕ್ಷರೇ, ಈಗತಾನೇ ವಿರೋಧಪಕ್ಷದ ಮಿತ್ರರಿಂದ ಶ್ರೀಮಾನ್ ಗಂಗಾಧರ್ ಅವರು ಋಣ ಪರಿಹಾರ ಕಾಯಿದೆಗೆ ಸಂಬಂಧಪಟ್ಟಂತೆ ಒಂದು ನಿರ್ಣಯವನ್ನು ಮಂಡಿಸಿ ಮಾತನಾಡುವಂಥ ಹಂತದಲ್ಲಿ ಅವರು ಸ್ವತಃ ವಕೀಲರಾಗಿ ತಮ್ಮ ಒಂದು ಅನುಭವವನ್ನು ಹೇಳಿದ್ದಾರೆ. ನಾನು ವಕೀಲನಾಗಿ ನನ್ನ ಒಂದು ಅನುಭವವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಅವರು ಒಂದು ಡೀಪ್‌ಪಸ್ಸ್‌ವನ್ನು ಉದಾಹರಿಸಿ ತೋರಿಸಿದ್ದಾರೆ. ಋಣ ಪರಿಹಾರ ಕಾಯಿದೆ ಬರುವುದಕ್ಕೆ ಮುಂಚೆ ಬಡವರಾಗಿರತಕ್ಕವರು ಕಷ್ಟಕಾಲದಲ್ಲಿ ಅಂದರೆ ತನ್ನ ಹೆಂಡತಿ ಪೆರಿಗೆಯ ಕಾಲದಲ್ಲಿ, ಮಗಳ ಮದುವೆ ಕಾಲದಲ್ಲಿ ಮತ್ತು ಅತ್ಯಂತ ಕಷ್ಟಕಾಲದಲ್ಲಿ ತೆಗೆದುಕೊಂಡ ೫೦-೧೦೦ ರೂಪಾಯಿಗಳಿಗೆ ಬಡ್ಡಿ ಸೇರಿಸಿ ೫೦೦ ರೂಪಾಯಿಗಳಿಗೆ ಬರಿಯಿಸಿಕೊಂಡು ಬಡವರನ್ನು ಶೋಷಣೆ ಮಾಡಿದಂಥ ಸನ್ನಿವೇಶಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಇಷ್ಟೇ ಅಲ್ಲದೆ ಕೋರ್ಟಿಗೆ ಹೋಗಿ ತಮ್ಮ ಹಣ ವಸೂಲು ಮಾಡುವುದಕ್ಕೆ ಡಿಕ್ರಿ ಹಾಕಿ ಬಡವರ ಚರ ಹಾಗೂ ಸ್ಥಿರ ಆಸ್ತಿಗಳನ್ನು ಲೂಟಿ ಮಾಡಿರತಕ್ಕ ಸನ್ನಿವೇಶಗಳನ್ನು ಕಂಡಿದ್ದರೂ ಇನ್ನೂ ಆ ಒಂದು ವ್ಯವಸ್ಥೆಗೆ ಜೊಬಲೆ ಹಾಗೂ ಪುರಸ್ಕಾರ ಮಾಡುವುದಾದರೆ ಅದು ಸರಿಯಲ್ಲ. ೧೯೨೦ರಕ್ಕೆ ೯೦ ಬಾಗ ಈ ಋಣ ಪರಿಹಾರ ಕಾಯಿದೆಯ ಉಪಯೋಗ ನಮ್ಮ ಹಳ್ಳಿಗಾಡುಗಳಲ್ಲಿ ಆಗಿದೆ. ನಾನೂ ಹಳ್ಳಿಯಲ್ಲಿ ಕೆಲಸ ಮಾಡುವಂಥ ವಕೀಲನಾಗಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ ಆದರೆ ಮಾನ್ಯ ಸದಸ್ಯರು ಸಹಕಾರ ಸಂಘಗಳ ಮುಖಾಂತರ ಕೊಟ್ಟ ಸಾಲವನ್ನು, ಬ್ಯಾಂಕ್‌ಗಳ ಮುಖಾಂತರ ಕೊಟ್ಟ ಸಾಲಗಳನ್ನೂ ಸಹ ಋಣ ಪರಿಹಾರ ಕಾಯಿದೆಯನ್ವಯ ಮಾಡಬೇಕು ಎಂದು ಹೇಳಿದರೆ ಅದು ಯಾವ ನ್ಯಾಯ? ಕಷ್ಟಕಾಲದಲ್ಲಿ ಮನುಷ್ಯ ಸಾಲ ಮಾಡುತ್ತಾನೆ. ಅದು ಸಾಲವನ್ನು ಕೊಂಡಾಗ ಹಾಲೋಗರಂಡಂತೆ, ಸಾಲಿಗನು ಬಂದು ಎಳೆಯುವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ ಎಂದು ಹೇಳಿದಂತೆ, ಸಾಲ ಮಾಡಿದವನು ಮತ್ತಷ್ಟು ಕಷ್ಟಕ್ಕೆ ಸಿಲುಕುತ್ತಾನೆಯೇ ಹೊರತು ಅವನ ಕಷ್ಟ ಪರಿಹಾರವಾಗುವುದಿಲ್ಲ. ಈ ಎಲ್ಲಾ ದೃಷ್ಟಿಯಿಂದಲೂ ನೋಡಿದರೆ ನಮ್ಮ ಸರ್ಕಾರ ತಂದಂಥ ಋಣ ಪರಿಹಾರ ಕಾಯ್ದೆ ತುಂಬಾ ಆಸುಕೂಲಕರವಾಗಿದೆ. ಮಾನ್ಯ ಸದಸ್ಯರು ತಂದಿರತಕ್ಕಂಥ ನಿರ್ಣಯದಿಂದ ಪ್ರಯೋಜನವಿಲ್ಲ. ಸರ್ಕಾರ ಬಡವರ ಕಷ್ಟಕ್ಕೆ ಅನುಕೂಲವಾಗುವಂತೆ ಮಾತ್ರ ಸಾಲ ಕೊಡುವ ಯೋಜನೆಗಳನ್ನು ಹಾಕಿಕೊಂಡಿದೆ. ಇದು ಸ್ತುತ್ಯಾರ್ಹವಾದುದು. ಮಾನ್ಯ ಶಾಮಣ್ಣನವರು ತಮ್ಮ ಅನುಭವದ ಮಾತುಗಳನ್ನು ಹೇಳಿದ್ದಾರೆ. ವಾದಕ್ಕಾಗಿ ನಾವು ರೆಸಲ್ಯೂಷನ್ ಅನ್ನು ಸಪೋರ್ಟ್ ಮಾಡಬೇಕಾಗಿದೆಯೇ ಹೊರತು ವಾಸ್ತವಿಕ ದೃಷ್ಟಿಯಿಂದ ನಾವು ಇದನ್ನು ಪರಿಶೀಲನೆ ಮಾಡಿದಾಗ ಮಾನ್ಯ ಗಂಗಾಧರ್ ಅವರ ರೆಸಲ್ಯೂಷನ್‌ನಿಂದ ಪರಿಹಾರ ಸಿಕ್ಕವುದಿಲ್ಲ. ನಮ್ಮ ಜನರ ಜೀವನ ಚಿತ್ರವನ್ನು ಇದು ಸರಿಯಾದ ರೀತಿಯಲ್ಲಿ ರೂಪಿಸುತ್ತಿಲ್ಲ, ವಾದಕ್ಕಾಗಿ ಇದು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಎಸ್. ಪ್ರಭಾವತಿ (ಚಾಮರಾಜ ಪೇಟೆ).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಗಂಗಾಧರ್ ಅವರು ತಂದಿರತಕ್ಕಂಥ ನಿರ್ಣಯವನ್ನು ಅನುಮೋದಿಸುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಶಾಮಣ್ಣನವರೂ ಸಹ ಇದರ ಬಗ್ಗೆ ಎರಡು ಮಾತುಗಳನ್ನು ಹೇಳಿ. ಇದನ್ನು ವಾದಕ್ಕಾಗಿಯೇ ಬೆಂಬಲಿಸಬೇಕಾಗಿದೆ ಎಂದರು. ನಮ್ಮ ಹಳ್ಳಿಗಳಲ್ಲಿ ಜನರು, ತೆಗೆದುಕೊಂಡ ಸಾಲವನ್ನು 'ಕೊಟ್ಟವರ ಒಡವೆ ಬೇಡ' ಎಂದು ಹೇಳಿ ವಾಪಸ್ ಕೊಡುವಂಥ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಸದಸ್ಯರಾದ ರಾಮಯ್ಯನವರು, ಸರ್ವಜ್ಞನ ವಚನವನ್ನು ಹೇಳಿ, ಬಡವರಿಗೆ ಸಾಲವನ್ನು ಖಾಸಗಿಯವರು ಕೊಡಬೇಡಿ ಎನ್ನುವ ಅರ್ಥದಲ್ಲಿ ಹೇಳಿದರು. ಖಾಸಗೀಯವರು ಕೊಟ್ಟ ಸಾಲವನ್ನು ಋಣ ಕಾಯಿದೆಯ ಪ್ರಕಾರ ಕೊಡದೇ ಇರುವುದು, ಸರ್ಕಾರದವರು ಕೊಟ್ಟ ಸಾಲವನ್ನು ವಸೂಲು ಮಾಡುವುದು, ಇದು ಯಾವ ನ್ಯಾಯ? ನಮ್ಮ ಹಳ್ಳಿಗಳಲ್ಲಿ

ಇನ್ನೊಂದು ಕಥೆ ಹೇಳುತ್ತಾರೆ, ಒಬ್ಬ ರಾಜಕಾರಣಿ ಸಮಾಜ ವಾದವನ್ನು ಹೇಳಿಕೊಂಡು, ಇದು ಬಹಳ ಸುಲಭವಾದ ವಿಷಯ, ಹೇಗೆಂದರೆ, ಒಬ್ಬನಿಗೆ ಎರಡು ಕುದುರೆಗಳು ಇದ್ದರೆ, ಕುದುರೆ ಇಲ್ಲದವನಿಗೆ ಒಂದು ಕೊಡುವುದು, ಇನ್ನೊಂದನ್ನು ತಾನು ಇಟ್ಟುಕೊಳ್ಳುವುದು ಎಂದು. ಇದನ್ನು ತಿಳಿದು ಒಬ್ಬನು, ಆ ರಾಜಕಾರಣಿ ಹತ್ತಿರ ಇದ್ದ ಎರಡು ಕೋಳಿಗಳಲ್ಲಿ ಒಂದನ್ನು ನನಗೆ ಕೊಡು ಎಂದು ಕೇಳಿದನಂತೆ. ಆಗ ರಾಜಕಾರಣಿ ಸಿಟ್ಟಿಗೆದ್ದು. ನನ್ನ ಹತ್ತಿರ ಎರಡು ಕೋಳಿ ಇರುವುದನ್ನು ನಿನಗೆ ಯಾರು ಹೇಳಿದರು ಎಂದು ಕೇಳಿದನಂತೆ. ಹೀಗೆಯೇ, ಖಾಸಗೀಯವರು ಸಾಲ ಕೊಟ್ಟರೆ ಅದಕ್ಕೆ ಋಣಕಾಯಿದೆಯನ್ನು ಅನುಸರಿಸುವುದು, ಸರ್ಕಾರದವರು ಸಾಲ ಕೊಟ್ಟರೆ ಅದರನ್ವಯ ಮಾಡದೆ ಇರುವುದು ಯಾವ ನ್ಯಾಯ? ಇದು ನ್ಯಾಯವಾದ ಕಾನೂನೇ? ಯಾರೂ ಕೊಟ್ಟವರೆ ಒಡವೆ ಕೊಡಬಾರದು ಎಂದು ಹೇಳುವುದಿಲ್ಲ. ಮಾನ್ಯ ಸದಸ್ಯರುಗಳು ಬಡವರಿಗೆ ಬರತಕ್ಕ ಕಷ್ಟಗಳನ್ನು ಯೋಚನೆ ಮಾಡಬೇಕು. ಬ್ಯಾಂಕನವರುಗಳಿಗೆ, ಅವರು ಕೊಟ್ಟ ಸಾಲವನ್ನು ವಾಪಸ್ ಪಡೆಯಬೇಕು ಎಂದು ನೀವು ಹೇಳುವುದಾದರೆ, ಈ ತಕಾವಿ ಸಾಲ, ಬಾವಿ ಸಾಲಗಳನ್ನು ನೀವು ರೈತರಿಗೆ ಕೊಡುತ್ತೀರಿ, ಇವುಗಳನ್ನೂ ಏಕೆ ಈ ಋಣ ಪರಿಹಾರ ಕಾಯಿದೆಯನ್ವಯ ಅವರಿಗೆ ಇದನ್ನು ಮಾಫಿ ಮಾಡಬಾರದು? ಸರ್ಕಾರದವರು ಕೊಟ್ಟರೆ ಸಾಲ, ಬೇರೆಯವರು ಕೊಟ್ಟರೆ ಸಾಲ ಅಲ್ಲವೇ? ಎನ್ನುವುದು ನನ್ನ ಪ್ರಶ್ನೆ? ಆದ್ದರಿಂದ ಮಾನ್ಯ ಗಂಗಾಧರ್ ಅವರು ತಂದಂಥ ನಿರ್ಣಯಕ್ಕೆ ಪ್ರೋತ್ಸಾಹ ಕೊಡುವುದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ಋಣ ಪರಿಹಾರ ಕಾಯಿದೆಗೆ ತಂದಿರತಕ್ಕ ತಿದ್ದುಪಡಿಯನ್ನು ತೆಗೆದುಹಾಕಬೇಕು ಎಂದು ನಾನು ಹೇಳುತ್ತೇನೆ. ಇದಕ್ಕನುಗುಣವಾಗಿ ಒಂದು ತಿದ್ದುಪಡಿಯನ್ನು ತಂದು ಎಲ್ಲಾ ಸಾಲಗಳನ್ನು ಋಣ ಪರಿಹಾರ ಕಾಯಿದೆ ಪ್ರಕಾರ ತೀರ್ಮಾನ ಮಾಡಿದರೆ ಎಲ್ಲಾ ಜನಗಳಿಗೂ ಅನುಕೂಲವಾಗುತ್ತದೆ. ಈ ವಿಷಯವನ್ನು ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ಮಂತ್ರಿಗಳು ಚೆನ್ನಾಗಿ ತಿಳಿಯಬೇಕು. ಮಾನ್ಯ ಸದಸ್ಯರು ಈ ಸಂದರ್ಭದಲ್ಲಿ ಸರ್ವಜ್ಞನ ವಚನವನ್ನು ಉದಾಹರಿಸಿ ಮಾತನಾಡಿದ್ದಾರೆ. ಸಾಲವನ್ನು ಕೊಡುವಾಗ ರೈತನ ಕಿಬ್ಬದಿಯ ಕೀಲು ಮುರಿಯುತ್ತದೆ ಎಂದು ಹೇಳಿದ್ದಾರೆ. ಸರ್ಕಾರದವರು ತಾವು ಕೊಟ್ಟ ಸಾಲವನ್ನು ಕೇಳುವಾಗ, ಅಥವಾ ವಸೂಲು ಮಾಡುವಾಗ ಬಡವರ ಕೀಲು ಮುರಿಯುವುದಿಲ್ಲವೇ? ಇಂಥ ತೊಂದರೆಗಳನ್ನೆಲ್ಲಾ ತಪ್ಪಿಸಿ, ಬಡವರಿಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ ನೀಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈಗಿನ ಪರಿಸ್ಥಿತಿಗಳಲ್ಲಿ ಬಡವರಿಗೆ ಎಲ್ಲಿಯೂ ಸಾಲ ಸಿಕ್ಕುತ್ತಿಲ್ಲ. ಬಡವನ ಹೆಂಡತಿ ಹೆರಿಗೆಯಾದಾಗ, ಬಡವ ಸತ್ತಾಗ, ಹೆಣ ಸುಡಬೇಕಾದರೂ ಅವನಿಗೆ ಸಾಲದ ಅವಶ್ಯಕತೆ ಇರುತ್ತದೆ. ಇದಕ್ಕೆ ಸರ್ಕಾರದವರು ಹಣ ಕೊಡುವುದಿಲ್ಲ. ಬಡವ ಖಾಸಗೀಯವರುಗಳ ಹತ್ತಿರ ಹಣಕ್ಕೆ ಹೋಗಲೇಬೇಕಾಗುತ್ತದೆ. ಎಲ್ಲರಿಗೂ ಸಾಲ ವಸೂಲು ಮಾಡುವಂಥ ಸುಲಭ ರೀತಿಯ ಕಾನೂನಿನ ಅವಶ್ಯಕತೆ ಇದೆ. ಎಲ್ಲರ ಒಡವೆಗಳೂ ಒಂದೇ. ಒಬ್ಬರಿಗೆ ಸಾಲ ಕೊಡಬೇಕು, ಇನ್ನೊಬ್ಬರಿಗೆ ಸಾಲ ವಾಪಸ್ ಕೊಡಬಾರದು ಎಂದು ಹೇಳುವುದು ನ್ಯಾಯವಲ್ಲ. ಆದ್ದರಿಂದ ಮಾನ್ಯ ಗಂಗಾಧರ್ ಅವರು ತಂದಿರತಕ್ಕ ನಿರ್ಣಯ ಸಮಯೋಚಿತವಾಗಿದೆ. ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ಬೆಂಬಲ ನೀಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಮುತ್ತಿಕಟ್ಟಿ (ರೋಣ)—ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ವಿರೋಧಪಕ್ಷದ ಸದಸ್ಯರಾದ ಮಾನ್ಯ ಗಂಗಾಧರರವರು ಋಣ ವಿಮುಕ್ತ ಮಸೂದೆಯನ್ನು ಬ್ಯಾಂಕ್‌ಗಳ ಮತ್ತು ಸರ್ಕಾರದಿಂದ ತೆಗೆದುಕೊಂಡಂತಹ ಸಾಲಕ್ಕೂ ಅನ್ವಯಿಸಬೇಕು ಎಂದು ನಿರ್ಣಯವನ್ನು ತಂದಿದ್ದಾರೆ. ಆದರೆ ನಾವು ಋಣ ವಿಮುಕ್ತ ಮಸೂದೆಯನ್ನು ತಂದ ಉದ್ದೇಶ ಇಷ್ಟೆ. ಕೆಲವಾರು ಜನ ಹಳ್ಳಿಯಲ್ಲಿರತಕ್ಕ ದೊಡ್ಡ ದೊಡ್ಡ ಲೇವಾದೇವಿ ಜನರು ಸಾಮಾನ್ಯ ಜನರನ್ನು ಬಡ್ಡಿಗೆ ಬಡ್ಡಿಯನ್ನು ವಸೂಲುಮಾಡಿ ನೂರಕ್ಕೆ ನೂರು ಜನರನ್ನು ಶೋಷಣೆ ಮಾಡುತ್ತಿದ್ದರು, ಇದನ್ನು ತಪ್ಪಿಸಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ನಮ್ಮ ಸರ್ಕಾರದವರು ಈ ಋಣ ವಿಮುಕ್ತ ಮಸೂದೆಯನ್ನು ತಂದಿದ್ದಾರೆ. ಇದನ್ನು ಸಹಕಾರ ಬ್ಯಾಂಕುಗಳಿಗೂ ಮತ್ತು ಎಲ್ಲಾ ಬ್ಯಾಂಕುಗಳ ಸಾಲಕ್ಕೂ ವಿಸ್ತರಿಸಬೇಕು ಎನ್ನುವ ಮಾತನ್ನು ಮಾನ್ಯ ಸದಸ್ಯರಾದ ಗಂಗಾಧರ್ ಅವರು ಹೇಳಿದ್ದಾರೆ. ಸಹಕಾರ ಸಂಘಗಳ ಹಾಗೂ ಇತರೆ ಬ್ಯಾಂಕುಗಳ ಸಾಲವನ್ನು ಹಿಂದುಳಿದ ವರ್ಗದವರಿಗೆ ಮತ್ತು ಸಣ್ಣ ಹಿಡುವಳಿದಾರರಿಗೆ ಕಡಿಮೆ ಬಡ್ಡಿದರದಲ್ಲಿ ಸರ್ಕಾರದವರು ಕೊಟ್ಟಿರುತ್ತಾರೆ. ಇದನ್ನೂ ಸಹ ಈ ದಿವಸ ಋಣ ವಿಮುಕ್ತ ಕಾಯಿದೆಯಲ್ಲಿ ತರಬೇಕು ಎನ್ನುವುದೂ ಅಷ್ಟು ಸರಿಯಲ್ಲ. ನಾನೂ ಹಳ್ಳಿಯಿಂದ ಬಂದಿರತಕ್ಕವನು. ಹಳ್ಳಿಗಳಲ್ಲಿ

ಇವತ್ತು ಖಾಸಗೀ ಲೇವಾದೇವಿಗಾರರು ಮೂರು ರೂಪಾಯಿಗಳನ್ನು ಕೊಟ್ಟು ೫೦ ರೂಪಾಯಿಗಳಿಗೆ ಪ್ರಾಂಡ್ ಬರೆಯಿಸಿಕೊಂಡು ಬಡವರನ್ನು ಶೋಷಣೆ ಮಾಡುತ್ತಿದ್ದರು. ಸಾಮಾನ್ಯವಾಗಿ ಇವರು ತಮ್ಮ ಹಣವನ್ನು ಸುಗ್ಗಿಯ ಕಾಲದಲ್ಲಿ ಬೆಳೆದಂಥ ಜೋಳಕ್ಕಾಗಲೀ, ಅಥವಾ ಇನ್ನಾವುದೋ ಬೆಳೆಗಾಗಲೀ ತೆಗೆದುಕೊಂಡು ಹೋಗುವುದು ಇತ್ತು. ಇದರಿಂದಾಗಿ ರೈತನು ಯಾವಾಗಲೂ ಕಷ್ಟದಲ್ಲಿ ಸಿಕ್ಕಿಕೊಂಡು ನರಳಬೇಕಾಗಿತ್ತು. ಇದು ಹೋಗಬೇಕು. ಪ್ರತಿಯೊಬ್ಬರೂ ತಮ್ಮ ದುಡಿಮೆಯಿಂದ ಸುಖವಾಗಿರಬೇಕು ಎನ್ನುವ ಉದ್ದೇಶದಿಂದ ಸರ್ಕಾರದವರು ಈ ಕಾಯಿದೆಯನ್ನು ತಂದಿದ್ದಾಗಿದೆ. ಇವೊತ್ತು ಇವರು ಇಲ್ಲಿ ಒಂದು ನಿರ್ಣಯವನ್ನು ತಂದಿದ್ದಾರೆ. ಆದರೆ ಇಲ್ಲಿಯವರೆಗೆ ಇರೆತಕ್ಕಂಥ ನೈಜ ಪರಿಸ್ಥಿತಿ ಏನೆಂದರೆ. ಈ ಸಹಕಾರ ಸಂಘಗಳ ಮೂಲಕ, ಬ್ಯಾಂಕ್‌ಗಳ ಮೂಲಕ, ಸಾಮಾನ್ಯ ಜನತೆಗೆ ಆದರಲ್ಲಿಯೂ ಹಿಂದುಳಿದ ವರ್ಗದವರಿಗೆ, ದುಡಿಯುವ ವರ್ಗದವರಿಗೆ ೧೦ ಪರ್ಸೆಂಟ್‌ನಷ್ಟು ಸಾಲ ಸಿಕ್ಕಲ್ಲ, ಮಾನ್ಯ ಮಂಜಿಳಾ ಸದಸ್ಯರು ಮಾತನಾಡುವಾಗ ಹೇಳಿದರು. ಈ ಒಂದು ಕಾನೂನು ತಂದಮೇಲೆ. ಯಾರ ಮನೆಯಲ್ಲಿಯಾದರೂ ಒಬ್ಬರು ಸತ್ತರೆ, ಜೀಣ ಪುಗಿಯಲು ಹಣ ಸಾಲ ಸಿಕ್ಕಿದಂತಹ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ ಎಂದು ಹೇಳಿದರು. ಇಂಥ ಸಂದರ್ಭಗಳಲ್ಲಿ ಸಾಲ ಕೊಡಲು ನಮ್ಮ ಸರ್ಕಾರ ಬೇರೆ ಒಂದು ವ್ಯವಸ್ಥೆ ಮಾಡಿದೆ. ಯಾರಿಗಾದರು ಅತ್ಯಂತ ಅವಶ್ಯಕತೆ ಇದ್ದಾಗ, ಯಾವುದೇ ಜಮೀನನು ಇಲ್ಲದೆ ನೇರವಾಗಿ ಸಾಲ ಪಡೆಯುವ ವ್ಯವಸ್ಥೆ ಮಾಡಿದೆ. ಅಪ್ಲಿಕೇಷನ್ ಕೊಟ್ಟ ಕೂಡಲೆ ಸಹಕಾರ ಸಂಘಗಳ ಮೂಲಕ ೧೨೫ ರೂ.ಗಳಿಂದ ಒಡಿದು ೨೫೦ ರೂ.ಗಳವರೆಗೆ ಸಾಲ ಕೊಡುವ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರ ನಿರ್ಮಾಣ ಮಾಡಿದೆ. ಇದಕ್ಕಾಗಿ ಪ್ರತಿ ಸಹಕಾರಿ ಸಂಘದಲ್ಲಿಯೂ ಎರಡು ಸಾವಿರ ರೂ.ಗಳನ್ನು ಪ್ರತ್ಯೇಕವಾಗಿ ಇಡಲಾಗಿದೆ. ಮುಖ್ಯವಾಗಿ ಇವೊತ್ತು ಸಹಕಾರಿ ಸಂಘಗಳಲ್ಲಿರತಕ್ಕಂಥ ಹಣ ಮತ್ತು ಬ್ಯಾಂಕ್‌ಗಳಲ್ಲಿರತಕ್ಕಂಥ ಹಣ ಪ್ರತಿಯೊಬ್ಬರ ಸ್ವತ್ತಾಗಿದೆ. ಈ ದೇಶದಲ್ಲಿರ ಕ್ಕಂಥ ಎಲ್ಲ ಜನಾಂಗದವರ ಸ್ವತ್ತಾಗಿದೆ. ಇಂತಹ ಕಡೆಗಳಿಂದ ಸಾಲ ಪಡೆದಿರುವುದನ್ನು ಮನ್ನಾಗಿ ಮಾಡಬೇಕೆಂದು ಹೇಳುವುದು ಸರಿಯಲ್ಲ. ಇವೊತ್ತು ಸಾಮಾನ್ಯ ಜನತೆಗ ಅಂದರೆ ಗಂಡಿ ಕೈಗಾರಿಕೆ ಮಾಡುವವರಿಗೆ, ಕಮ್ಮಾರಿಕೆ ಮಾಡುವವರಿಗೆ, ಚಮ್ಮಾರ ಕೆಲಸ ಮಾಡುವವರಿಗೆ ೪ ಪರ್ಸೆಂಟ್ ಬಡ್ಡಿ ಪ್ರಕಾರ ಸಾಲವನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ. ಆದಕಾರಣ ಇಂತಹ ಒಂದು ನಿರ್ಣಯವನ್ನು ಪಾಸು ಮಾಡುವ ಆವಶ್ಯಕತೆಯೇ ಇಲ್ಲ. ಇದಕ್ಕೆ ಬದಲು ಈ ಸಣ್ಣ ಪಿಡುವಳಿದಾರರಿಗೆ, ಕೈಜಿ ಕೂಲಿಗಾರರಿಗೆ, ದುಡಿಯುವ ವರ್ಗದವರಿಗ ೪ ಪರ್ಸೆಂಟ್ ಬಡ್ಡಿಯ ಮೇಲೆ ಸಾಲವನ್ನು ಬಂಡವಾಳದ ಶೇಕಡಾ ೨೦ರಷ್ಟನ್ನು ಕೊಡಬೇಕೆಂದು ಈಗ ಏನು ಒಂದು ನಿಯಮವನ್ನು ಮಾಡಲಾಗಿದೆ ಆದನ್ನು ಬೇಕಾದರೆ ಶೇಕಡಾ ೪೦ರವರೆಗೆ ಹೆಚ್ಚಿಸಿ, ಇಂತಹ ಜನಾಂಗದವರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುವ ವ್ಯವಸ್ಥೆಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸಿಪುರ)—ಮಾನ್ಯ ಅಧ್ಯಕ್ಷರೇ, ಬಿಸನಸ್ ಅಡ್ವೈಸರಿ ಕಮಿಟಿಯಲ್ಲಿ ಇಂದಿನ ಸಭೆಯನ್ನು ೨೯ ಇಲ್ಲವೇ ೩೦ನೇ ತಾರೀಖಿನವರೆಗೆ ಮುಂದೂಡಬೇಕೆಂದು ತಾತ್ಕಾಲಿಕವಾಗಿ ನಿರ್ಣಯವಾಗಿದೆ. ನಾನು ತಮಗೆ ರೂಲ್ ೩೧೨ರ ಕೆಳಗೆ ಚರ್ಚೆ ಮಾಡಲು ಈ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಪ್ರಸಿದ್ಧ ಸರ್ಕಾರೀ ಅಡ್ವೋಕೇಟ್ ಆದಂಥ ಶ್ರೀ ಜಯಕಾಂತರಾಜ ಅರಸ್ ಅವರು ಸರ್ಕಾರದ ಹಣ ಪಡೆದು ಕೆಲಸ ಮಾಡುತ್ತಿರುವಾಗ, ಗ್ರೋವರ್ ಕಮಿಷನ್ ಮುಂದೆ ಮುಖ್ಯ ಮಂತ್ರಿಗಳ ಪರವಾಗಿ ಏನು ನ್ಯಾಯವಾದಿ ಕೆಲಸ ಮಾಡುತ್ತಿದ್ದಾರೆ, ಅದು ಸರಿಯೇ ಎಂಬ ಬಗ್ಗೆ ಚರ್ಚೆ ಮಾಡಲು ನಾನು ನೋಟೀಸ್ ಕೊಟ್ಟಿದ್ದೇನೆ. ಅದನ್ನು ಮಂಗಳವಾರ ಚರ್ಚೆಗೆ ತೆಗದು ಕೊಳ್ಳೋಣವೆಂದು ತಾವು ನಿರ್ಣಯ ಮಾಡಿದ್ದೀರಿ. ಆದರೆ ಈಗ ಸಭೆ ೨೯ರವರೆಗೆ ಮುಂದಕ್ಕೆ ಹೊಗುತ್ತಿರುವುದರಿಂದ, ಮುಂದೆ ಸಭೆ ಸೇರುವ ಮೊದಲನೆಯ ದಿವಸವೇ ಇದನ್ನು ತಾವು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು—ಆಫ್ಟರಲ್ಲಿ ಸ್ಟೇಟ್‌ಮೆಂಟ್ ತಯಾರಾಗಿರುತ್ತದೆ.